ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆಯಬೇಕಿದ್ದ ವಿಜಯ್ ಹಜಾರೆ ಪಂದ್ಯಕ್ಕೆ ಅನುಮತಿ ನೀಡುವುದಿಲ್ಲವೆಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.


24 ಡಿಸೆಂಬರ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 282 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ಟೈಮ್ ಪಾಸ್ ಮತ್ತು ಫೋಕಸ್ ನಡುವೆ ಸ್ವಾಸ್ಥ್ಯ ಅಡಗಿದೆ ! » 2



ಆತ್ಮಪೂರ್ವಕವಾಗಿ ಮಾಡಿದ ಸೇವೆ ಚಿರಕಾಲ ಉಳಿಯಲಿದೆ » 3



ರೈತರ ಏಳಿಗೆಯಾದರೆ ಗ್ರಾಮ ಸ್ವರಾಜ್ಯ ಕನಸು ನನಸು » 4


# ಕೇಂದ್ರ ಸಚಿವರೊಂದಿಗೆ ಡಿ.ಕೆ.ಶಿ. ಸರಣಿ ಸಭೆ


## ನೀರಾವರಿ ಯೋಜನೆ, ನದಿ ಜೋಡಣೆ ಬಗ್ಗೆ ಚರ್ಚೆ | ರಾಜ್ಯದ ಅಭಿವೃದ್ಧಿ ಕಾರ್ಯಗಳ ಪ್ರಸ್ತಾವನೆ ಸಲ್ಲಿಕೆ

• ಪ್ರಜೋದಯ ವರದಿ

**ನವದೆಹಲಿ:** ರಾಜ್ಯದ ಹಿತಾಸಕ್ತಿಗೆ ಅನುಗುಣವಾಗಿ ನೀರಾವರಿ ಯೋಜನೆಗಳು ಹಾಗು ಇತರೆ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೇಂದ್ರ ಸಚಿವರ ಜೊತೆ ಸರಣಿ ಸಭೆಗಳನ್ನು ನಡೆಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದ್ದಾರೆ.

ಮಂಗಳವಾರ ಕರ್ನಾಟಕ ಭವನದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನದಿಗಳ ಜೋಡಣೆಗೆ ಸಂಬಂಧಪಟ್ಟಂತೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಕರ್ನಾಟಕದ ಹಲವು ನೀರಾವರಿ ಯೋಜನೆಗಳ ಬೇಡಿಕೆ ಬಗ್ಗೆ ಚರ್ಚೆ ನಡೆಸುತ್ತೇನೆಂದು ತಿಳಿಸಿದರು.

ತುಂಗಭದ್ರಾ ನದಿ ನೀರನ್ನು ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳು ಸಮರ್ಥವಾಗಿ ಬಳಕೆ ಮಾಡಿಕೊಳ್ಳಲು ಸಮತೋಲಿತ ಅಣೆಕಟ್ಟು



ನಿರ್ಮಾಣ ಮಾಡಬೇಕಿದೆ. ನೀರಿನ ಸಂಗ್ರಹಣೆಗೆ ಪರ್ಯಾಯ ಸೌಲಭ್ಯದ ಅನಿವಾರ್ಯತೆ ಬಗ್ಗೆ ಕೇಂದ್ರ ಸಚಿವರಿಗೆ ಮನವರಿಕೆ ಮಾಡಿ ಕೊಡಲಾಗುವುದು. ಕೃಷ್ಣ ನ್ಯಾಯಾಧೀಕರಣದ ತೀರ್ಪಿನ ಅಧಿಸೂಚನೆ ಬಾಕಿ ಇರುವ ಬಗ್ಗೆ, ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದ್ದ ಅನುದಾನ ಬಿಡುಗಡೆಗೆ ಕೋರಲಾಗುವುದೆಂದು ಹೇಳಿದರು.

**ಕಾವೇರಿ ನದಿಗೆ ಮೇಕೆದಾಟು ಬಳಿ ಅಣೆಕಟ್ಟೆ ನಿರ್ಮಾಣ, ಮಹಾದಾಯಿ ನದಿಗೆ ಅಡ್ಡಲಾಗಿ ಕಳಸಾ-ಬಂಡೂರಿ ಅಣೆಕಟ್ಟು ನಿರ್ಮಿಸುವುದು ಸೇರಿ ರಾಜ್ಯದ ಹಿತಾಸಕ್ತಿಗೆ ಅನುವಾಗುವ ಎಲ್ಲಾ ವಿಷಯಗಳ ಬಗ್ಗೆ ಕೇಂದ್ರ ಸಚಿವರ ಜೊತೆ ಚರ್ಚಿಸುತ್ತೇನೆ.**

**-ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ**

### ಮನೋಹರ್ ಲಾಲ್ ಖಟ್ಟರ್ ಭೇಟಿ

ಕೇಂದ್ರ ವಸತಿ ಮತ್ತು ನಗರ ವ್ಯವಹಾರ ಸಚಿವ ಮನೋಹರ್ ಲಾಲ್ ಖಟ್ಟರ್ ಅವರನ್ನು ದೆಹಲಿ ಯಲ್ಲಿ ಭೇಟಿಯಾದ ಡಿ.ಕೆ.ಶಿವಕುಮಾರ್ ಅವರು, ನಮ್ಮ ಮೆಟ್ರೋ ರೈಲು ಸೇರಿ ಬೆಂಗಳೂರಿನ ಮೂಲಸೌಕರ್ಯ ಯೋಜನೆ, ಪ್ರಸ್ತಾವಗಳಿಗೆ ಅಗತ್ಯ ಅನುಮತಿ, ಸಹಕಾರ ನೀಡುವಂತೆ ಮನವಿ ಮಾಡಿದರು.

ದೇಶದ ಮಹಾನಗರಗಳಲ್ಲಿ ಒಂದಾಗಿರುವ ಬೆಂಗಳೂರಿನಲ್ಲಿ ಹಲವು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಹೀಗಾಗಿ, ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವನೆಗೆ ಕೇಂದ್ರ ವಸತಿ ಹಾಗು ನಗರ ವ್ಯವಹಾರಗಳ ಸಚಿವಾಲಯವು ಅನುಮತಿ ನೀಡಬೇಕೆಂದು ಮನೋಹರ್ ಲಾಲ್ ಖಟ್ಟರ್ ಅವರಿಗೆ ಕೋರಿದ್ದಾರೆ.

ಮುಖ್ಯವಾಗಿ ನಮ್ಮ ಮೆಟ್ರೋ 2ನೇ ಹಂತದ ಪರಿಷ್ಕೃತ ದರಕ್ಕೆ ಒಪ್ಪಿಗೆ. ಮೆಟ್ರೋ - 3ನೇ ಎ ಹಂತಕ್ಕೆ ಅಗತ್ಯ ಅನುಮೋದನೆ. ಆರ್‌ಆರ್‌ಟಿಎಸ್ ಯೋಜನೆಗೆ ಬೆಂಬಲ. ಮಿಟ್ಟಗಾನಹಳ್ಳಿ ಕೆರೆ ಬಳಿ ನಾನಾ ಹಂತದ ತ್ಯಾಜ್ಯ ವಿಲೇವಾರಿಗೆ ಅನುಮತಿ ಸೇರಿ ಬೆಂಗಳೂರಿನ ಅಭಿವೃದ್ಧಿಗೆ ಅಗತ್ಯವಾಗಿರುವ ಯೋಜನೆಗಳಿಗೆ ಅನುಮೋದನೆ ಹಾಗು ಬೆಂಬಲ ನೀಡುವಂತೆ ಕೇಂದ್ರ ಸಚಿವರಿಗೆ ಮನವಿ ಸಲ್ಲಿಸಿದರು.

ಮೆಟ್ರೋ 2ನೇ ಹಂತದ ಪರಿಷ್ಕೃತ ವೆಚ್ಚವು 26,405 ಕೋ.ರೂ.ನಿಂದ 40,425 ಕೋ. ರೂ.ಗೆ ಹೆಚ್ಚಳವಾಗಿದ್ದು, ರಾಜ್ಯ ಸರಕಾರ ಜೂ.5ರಂದು ಅನುಮೋದನೆ ನೀಡಿದೆ. ಈ ಪ್ರಸ್ತಾವನೆಯನ್ನು ಜೂ.9ರಂದೇ ಕೇಂದ್ರ ಸರಕಾರಕ್ಕೆ ಸಲ್ಲಿಸಿದ್ದು, ಒಪ್ಪಿಗೆ ಸಿಕ್ಕಿಲ್ಲ. ಅನುಮೋದನೆ ನೀಡಬೇಕೆಂದರು.

ಮೆಟ್ರೋ 3 ಎ ಹಂತ ಸರ್ಜಾಪುರದಿಂದ ಹೆಬ್ಬಾಳದ ವರೆಗೆ 36.59 ಕಿ.ಮೀ. ಉದ್ದದ ಮಾರ್ಗ, 28 ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿದೆ. ಇದರಲ್ಲಿ 22.14 ಕಿ.ಮೀ. ಮೇಲ್ಸೆತುವೆ, 14.45 ಕಿ.ಮೀ. ಸುರಂಗ ಮಾರ್ಗವಿರಲಿದೆ. ಈ ಯೋಜನೆಗೆ 28,405 ಕೋ.ರೂ. ವೆಚ್ಚ ಅಂದಾಜಿಸಲಾಗಿದೆ. ಜ.10ರಂದು ರಾಜ್ಯ ಸರಕಾರ ಒಪ್ಪಿಗೆ ನೀಡಿದ್ದು, ಜ.15ರಂದೇ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದ ಒಪ್ಪಿಗೆ ಬಾಕಿ ಇದ್ದು, ಅನುಮೋದನೆ ನೀಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

# ಕಾಲ್ನಡಿಗೆಯಲ್ಲಿ ಸಕಲೇಶಪುರ ಪಟ್ಟಣದ ಸಮಸ್ಯೆ ಆಲಿಸಿದ ಡಿಸಿ

• ಪ್ರಜೋದಯ ವರದಿ

- ರಸ್ತೆ, ಫುಟ್‌ಪಾತ್, ಪಾರ್ಕಿಂಗ್, ಸ್ವಚ್ಛತೆ ಬಗ್ಗೆ ಪರಿಶೀಲನೆ
- ನಿಗದಿತ ಅವಧಿಯೊಳಗೆ ಸಮಸ್ಯೆ ಸರಿಪಡಿಸಲು ಸೂಚನೆ

**ಸಕಲೇಶಪುರ:** ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಅವರು ಮಂಗಳವಾರ ಬೆಳಿಗ್ಗೆ ಪಟ್ಟಣಕ್ಕೆ ಭೇಟಿ ನೀಡಿ ವಿವಿಧ ಪ್ರದೇಶಗಳಲ್ಲಿನ ಅವ್ಯವಸ್ಥೆ ಪರಿಶೀಲಿಸಿದರು.

ಪಟ್ಟಣದ ಶಾಪ್ ಸಿದ್ದೇಗೌಡ ಶಾಲೆಯಿಂದ ಹಳೆ ಹಾಗು ಹೊಸ ಬಸ್ ನಿಲ್ದಾಣದವರೆಗೆ ನಡಿಗೆಯಲ್ಲೇ ಪರಿಶೀಲನೆ ನಡೆಸಿದ ಅವರು, ರಸ್ತೆ, ಫುಟ್‌ಪಾತ್, ಪಾರ್ಕಿಂಗ್ ಹಾಗು ಸ್ವಚ್ಛತೆ ಸಮಸ್ಯೆಗಳ ಕುರಿತು ಅಧಿಕಾರಿಗಳು ಮತ್ತು ಸಾರ್ವಜನಿಕರಿಂದ ಮಾಹಿತಿ ಪಡೆದರು. ರಾಷ್ಟ್ರೀಯ ಹೆದ್ದಾರಿ ಮರು ಡಾಂಬರೀಕರಣದ ಬಳಿಕ ರಸ್ತೆ ಎರಡೂ ಬದಿಗಳಲ್ಲಿ ಗ್ರಾವಿಲ್ ಹಾಕದಿರುವುದನ್ನು ಗಮನಿಸಿ, ಕೂಡಲೇ ತುಂಬಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಹಳೆ ಬಸ್ ನಿಲ್ದಾಣ ಸಮೀಪ ಫುಟ್‌ಪಾತ್ ಅತಿಕ್ರಮಿಸಿ ಅಂಗಡಿ ಮುಂಗಟ್ಟು ಹಾಕಿರುವ ಬೀದಿ ವ್ಯಾಪಾರಿಗಳನ್ನು ತೆರವುಗೊಳಿಸುವಂತೆ ಪುರಸಭೆ ಅಧಿಕಾರಿಗಳಿಗೆ

» ನಾಲ್ಕನೇ ಪುಟದಲ್ಲಿ



### ಫುಟ್‌ಪಾತ್ ಅತಿಕ್ರಮಣ ತೆರವಿಗೆ ಸೂಚನೆ

ಫುಟ್‌ಪಾತ್‌ಗಳು ಸಂಪೂರ್ಣ ಅತಿಕ್ರಮಣಗೊಂಡಿರುವ ಹಿನ್ನಲೆ ತೆರವುಗೊಳಿಸಿ ಸಾರ್ವಜನಿಕರಿಗೆ ಮುಕ್ತವಾಗಿ ಓಡಾಡಲು ಅವಕಾಶ ಕಲ್ಪಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿಗೆ ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು. ನಗರ ಸ್ವಚ್ಛವಾಗಿರಲು ನಾಗರಿಕರ ಸಹಕಾರ ಅತ್ಯಂತ ಮುಖ್ಯ. ಪೌರಕಾರ್ಮಿಕರು ಕಸ ತೆರವುಗೊಳಿಸಿದ ಬಳಿಕ ಮತ್ತೆ ಅದೇ ಸ್ಥಳದಲ್ಲಿ ಕಸ ಎಸೆಯುತ್ತಿರುವುದು ಕಂಡುಬಂದಿದ್ದು, ನಾಗರಿಕರು ಕಸವನ್ನು ನಿಗದಿತ ಸ್ಥಳದಲ್ಲೇ ಹಾಕಬೇಕು. ಬಸ್ ನಿಲ್ದಾಣದ ಸುತ್ತಮುತ್ತ ಎಲ್ಲೆಂದರಲ್ಲಿ ಉಗುಳಿರುವುದು ಗಮನಕ್ಕೆ ಬಂದಿದ್ದು, ಇಂತಹ ವರ್ತನೆ ಮುಂದುವರೆಸಬಾರದೆಂದರು.

### ಸರ್ಕಾರಿ ಶಾಲೆ ಶಿಕ್ಷಕನ ವಿರುದ್ಧ ಪೋಕ್ಸೋ ಪ್ರಕರಣ

• ಪ್ರಜೋದಯ ವರದಿ

**ಹಾಸನ:** ವ್ಯಾಸಂಗದಲ್ಲಿ ನಿರಾಸಕ್ತಿ ತೋರುತ್ತಿದ್ದಾಳೆಂದು ಶಿಕ್ಷಕನೊಬ್ಬ ವಿದ್ಯಾರ್ಥಿನಿ ಮೇಲೆ ಹಲ್ಲೆ ಹಾಗು ಅನುಚಿತವಾಗಿ ವರ್ತಿಸಿದ ಘಟನೆ ಶಾಂತಿಗ್ರಾಮ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಪೋಷಕರ ದೂರು ಆಧರಿಸಿ ಪೊಲೀಸರು ಶಿಕ್ಷಕ ಶ್ರೀನಿವಾಸ್ ಎಂಬಾತನ ವಿರುದ್ಧ ಸೋಮವಾರ ಪೋಕ್ಸೋ ಪ್ರಕರಣ ದಾಖಲಿಸಿದ್ದಾರೆ.

ಸುದ್ದಿ ತಿಳಿದ ಕೂಡಲೇ ಪೊಲೀಸರು ಸ್ಥಳಕ್ಕೆ ತೆರಳಿ ಮಹಜರು ನಡೆಸಿ ಬಾಲಕಿ ಹಾಗು ಪೋಷಕರ ಹೇಳಿಕೆ ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಿದ್ದಾರೆ. ಮಗಳು ಚೆನ್ನಾಗಿ ಓದದೇ ಇದ್ದರೆ ನಮಗೆ ಹೇಳಿದ್ದರೆ ಬುದ್ದಿ ಹೇಳುತ್ತಿದ್ದೇವು. ಆದರೆ ಎಡಗೈ ಗಾಯ ಆಗುವ ರೀತಿಯಲ್ಲಿ ಹಲ್ಲೆ ಮಾಡಿರುವುದಲ್ಲದೆ ಅನುಚಿತವಾಗಿ ವರ್ತಿಸಿರುವ ಶಿಕ್ಷಕನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಪೋಷಕರು ಹಾಗು ಸಾರ್ವಜನಿಕರು ಒತ್ತಾಯಿಸಿದ್ದಾರೆ.

### ಒಂದು ಸಾವಿರ ಕೆ.ಜಿ. ಗೋ ಮಾಂಸ ವಶ

• ಪ್ರಜೋದಯ ವರದಿ

**ಸಕಲೇಶಪುರ:** ಅಕ್ರಮವಾಗಿ ಗೋ ಮಾಂಸ ಸಾಗಾಟ ಮಾಡುತ್ತಿದ್ದ ಮಿನಿ ಅಶೋಕ ಲೈಲ್ಯಾಂಡ್ ಗೂಡ್ಸ್ ವಾಹನ ಚಾಲಕನನ್ನು ಬಂಧಿಸಿರುವ ಪೊಲೀಸರು ಸುಮಾರು ಒಂದು ಸಾವಿರ ಕೆ.ಜಿ. ಮಾಂಸ ವಶಪಡಿಸಿಕೊಂಡಿದ್ದಾರೆ.

ತಿಪಟೂರಿನ ಆರ್.ರಾಹಿಲ್ ಬಂಧಿತ ಆರೋಪಿ. ಡಿ.22ರ ರಾತ್ರಿ 3ರ ಸಮಯದಲ್ಲಿ ಖಚಿತ ಮಾಹಿತಿ ಮೇರೆಗೆ ನಗರ ಠಾಣೆ ಪಿಎಸ್ಐ ಕೆ.ಎಸ್.ಕೃಷ್ಣಪ್ಪ ಹಾಗು ಸಿಬ್ಬಂದಿ ಪಟ್ಟಣದ ಕಪ್ಪಿನ ಕೋಡಿ ದೇವಸ್ಥಾನದ ಬಳಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಗೂಡ್ಸ್ ವಾಹನ ತಡೆದಿದ್ದಾರೆ.

ವಾಹನ ಹಿಂಭಾಗ ಪರಿಶೀಲಿಸಿದಾಗ ಪ್ಲಾಸ್ಟಿಕ್ ಚೀಲಗಳಲ್ಲಿ ಗೋ ಮಾಂಸ ತುಂಬಿರುವುದು ಕಂಡು ಬಂದಿದೆ. ಹಾಸನದ 80 ಅಡಿ ರಸ್ತೆಯಲ್ಲಿರುವ ಮುಬಾರಕ್ ಎಂಬುವವರಿಗೆ ಸೇರಿದ ಮಟನ್ ಅಂಗಡಿಯ ಶೆಡ್‌ನಲ್ಲಿ ಶೇಖರಿಸಿಟ್ಟಿದ್ದ ಗೋಮಾಂಸವನ್ನು ತುಂಬಿಕೊಂಡು ಮಂಗಳೂರು ಮೂಲದ ಮೋಹಿದ್ದೀನ್ ಎಂಬುವವರಿಗೆ ತಲುಪಿಸಲು ಹೊರಟಿದ್ದಾಗಿ ಚಾಲಕ ಒಪ್ಪಿ ಕೊಂಡಿದ್ದಾನೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಚಿನ್ನದ ಸರ ಕಳವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಬಸ್ ಹತ್ತುವಾಗ ನೂಕು ನುಗ್ಗಲಿನಲ್ಲಿ ಮಹಿಳೆಯ ವ್ಯಾನಿಟಿ ಬ್ಯಾಗ್‌ನಿಂದ 33 ಗ್ರಾಂ ತೂಕದ ಚಿನ್ನದ ಸರ ಎಗರಿಸಿರುವ ಘಟನೆ ಪಟ್ಟಣದ ಬಸ್ ನಿಲ್ದಾಣದಲ್ಲಿ ನಡೆದಿದೆ.

ಬೆಂಗಳೂರಿನ ಕಾವಲ್ ಬೈರಾಸಂದ್ರ ನಿವಾಸಿ ವಹಿದಾ ಬಾನು ಎಂಬುವವರಿಗೆ ಸೇರಿದ 4.21 ಲಕ್ಷ ರೂ. ಬೆಲೆಯ ಸರ ಕಳುವಾಗಿದೆ. ಡಿ.20 ರಂದು ಹಾಸನದ ಎಸ್‌ಆರ್‌ಎಸ್ ಜ್ಯುವೆಲ್ಲರಿಯಲ್ಲಿ ಚಿನ್ನಾಭರಣ ಖರೀದಿಸಿದ್ದ ಅವರು ಆ ದಿನ ಸಂಬಂಧಿಕರ ಮನೆಯಲ್ಲೇ ವಾಸ್ತವ್ಯ ಮಾಡಿ ಮಾರನೇ ದಿನ ಕಿಕ್ಕೇರಿಯಲ್ಲಿರುವ ತಮ್ಮ ಸಹೋದರಿ ಮನೆಗೆ ತೆರಳುತ್ತಿದ್ದರು. ಚನ್ನರಾಯಪಟ್ಟಣ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ ಜನಜಂಗುಳಿಯಲ್ಲಿ ವ್ಯಾನಿಟಿ ಬ್ಯಾಗ್‌ನಿಂದ ಸರ ಕದಿಯ ಲಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಪ್ರಾಪ್ತೆ ಮೇಲೆ ಅತ್ಯಾಚಾರ: ಮಗುವಿಗೆ ಜನ್ಮ ನೀಡಿದ ಬಾಲಕಿ

• ಪ್ರಜೋದಯ ವರದಿ

**ಹಾಸನ:** ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ ಪ್ರೇಮದ ಬಲೆಗೆ ಬೀಳಿಸಿದ್ದ ಕಾಮುಕನೊಬ್ಬ ಲೈಂಗಿಕ ದೌರ್ಜನ್ಯ ಎಸಗಿ ಆಕೆ ಮಗುವಿಗೆ ಜನ್ಮ ನೀಡಿರುವ ಘಟನೆ ಜಿಲ್ಲೆಯಲ್ಲಿ ನಡೆದಿದೆ.

ಜಿಲ್ಲೆಯ ಖಾಸಗಿ ಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಬಾಲಕಿಯ ಮೇಲೆ ಅದೇ ಶಾಲೆಯ ವಾಹನ ಚಾಲಕ ರಂಜಿತ್ ಎಂಬಾತ 8 ತಿಂಗಳಿನಿಂದ ಲೈಂಗಿಕ ದೌರ್ಜನ್ಯವೆಸಗಿದ್ದು, ಆಕೆ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆ. ಇನ್ನು ಬಾಲಕಿ ಮತ್ತು ಮಗುವನ್ನು ಕೆಲ ದಿನಗಳ ಆರೈಕೆ ಬಳಿಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಾಂತ್ವನ ಕೇಂದ್ರಕ್ಕೆ ಒಪ್ಪಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

**ಪ್ರಕರಣ ಬೆಳಕಿಗೆ ಬಂದಿದ್ದು ಹೇಗೆ ?**

ಚಾಕೋಲೆಟ್ ಕೊಡುವುದಾಗಿ ಕರೆದೊಯ್ದ ರಂಜಿತ್ ಹಲವು ತಿಂಗಳ ಹಿಂದೆ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ. ಈ ವಿಚಾರ ಯಾರಿಗಾದರೂ ಹೇಳಿದರೆ ಕೊಲೆ ಬೆದರಿಕೆ ಹಾಕಿದ್ದ. ಹೀಗಾಗಿ ಬಾಲಕಿ ಸುಮ್ಮನಿದ್ದಳು. ಗರ್ಭಿಣಿಯಾದರೂ ಶಾಲಾ ಶಿಕ್ಷಕರಿಗೆ ಹಾಗು ಪೋಷಕರಿಗೆ ಸಂಶಯ ಬಾರದಿರುವುದು ಆಶ್ಚರ್ಯ ಮೂಡಿಸಿದೆ. 3 ದಿನಗಳ ಹಿಂದೆ ನಡೆದ ಕ್ರೀಡಾಕೂಟದಲ್ಲಿ ಬಾಲಕಿ ಓಟ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಹೊಟ್ಟೆ ನೋವು ಕಾಣಿಸಿಕೊಂಡಿದೆ. ಖಾಸಗಿ ಆಸ್ಪತ್ರೆಗೆ ದಾಖಲಿಸಿದಾಗ ಗರ್ಭಿಣಿಯಾಗಿರುವ ವಿಚಾರ ಗೊತ್ತಾಗಿದೆ. ತಕ್ಷಣ ಆಕೆಯನ್ನು ಹಿಮ್ಸ್‌ಗೆ ದಾಖಲಿದ್ದು, ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆ.

ಎಸ್‌ಎಸ್‌ಎಲ್‌ಸಿ ಓದಿರುವ ರಂಜಿತ್ ಬಿಎಸ್‌ಸಿ ಪದವೀಧರೆ ಯುವತಿಯನ್ನು ಪ್ರೀತಿಸಿ ಮದುವೆಯಾಗಿದ್ದು, ಇಬ್ಬರು ಮಕ್ಕಳಿದ್ದಾರೆ. ಆದರೂ ಶಾಲೆಯ ವಿದ್ಯಾರ್ಥಿನಿ ಮೇಲೆ ದೌರ್ಜನ್ಯ ಎಸಗಿದ್ದಾನೆ. ಅಪ್ರಾಪ್ತೆ ಆಸ್ಪತ್ರೆಗೆ ದಾಖಲಾಗಿರುವ ವಿಚಾರ ತಿಳಿದು ನಾಪತ್ತೆಯಾಗಿದ್ದಾನೆ. ಸ್ಥಳೀಯ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿದೆ.

# ಸರ್ಕಾರ ನಿವೃತ್ತ ನೌಕರರನ್ನು ಕಡೆಗಣಿಸಬಾರದು

## ವಿಭಾಗ ಮಟ್ಟದ ಸಮಾವೇಶದಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ಪ್ರತಿಪಾದನೆ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ಜೀವನ ಸುಖಕರವಾಗಿಲ್ಲ. ಹಾಗಾಗಿ ಅವರಿಗೆ ಇನ್ನಷ್ಟು ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕು. ಅವರನ್ನು ಕಡೆಗಣಿಸಬಾರದೆಂದು ಶಾಸಕ ಹೆಚ್.ಪಿ. ಸ್ವರೂಪ್ ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ಮೈಸೂರು ವಿಭಾಗ ಮಟ್ಟದ ಪದಾಧಿಕಾರಿಗಳು, ನಿವೃತ್ತ ನೌಕರರು ಹಾಗು ಕುಟುಂಬ ಪಿಂಚಣಿದಾರರ ಸಮಾವೇಶದಲ್ಲಿ ಮಾತನಾಡಿದ ಅವರು, ನಿವೃತ್ತ ನೌಕರರು ಸಮಾಜದ ಬಹುಮುಖ್ಯ ಅಂಗ. ಸರ್ಕಾರಿ ನೌಕರಿಯಲ್ಲಿ ಸೇವೆ ಸಲ್ಲಿಸಿದ ಅವರ ಬೇಡಿಕೆಗಳನ್ನು ಈಡೇರಿಸುವ ಕೆಲಸವಾಗಬೇಕೆಂದು ಹೇಳಿದರು.



ನಿವೃತ್ತ ನೌಕರರು ಹಾಗು ಕುಟುಂಬ ಪಿಂಚಣಿದಾರರ ಸಮಸ್ಯೆಗೆ ಸ್ಪಂದಿಸುವುದು ಸರ್ಕಾರದ ಕರ್ತವ್ಯವಾಗಿದೆ. ವಿಷಯದ ಗಂಭೀರತೆಯ ಕುರಿತು ಮುಖ್ಯಮಂತ್ರಿ ಗಮನ ಸೆಳೆಯಲಾಗುವುದು. ತಾನು ಕೂಡ ಮುಂದಿನ ದಿನಗಳಲ್ಲಿ ನಿವೃತ್ತ ಸರ್ಕಾರಿ ನೌಕರರ ಪರವಾಗಿ ಸರ್ಕಾರದ ಗಮನ ಸೆಳೆಯುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವೆ, ಅವರ ಕ್ಷೇಮಾಭಿವೃದ್ಧಿಗೆ ತನ್ನ ಕೈಲಾದ ಸಹಾಯ ಮಾಡುವುದಾಗಿ ಭರವಸೆ ನೀಡಿದರು.

ಈ ಕುರಿತು ನನ್ನೊಂದಿಗೆ ನಿವೃತ್ತ ನೌಕರರ ಸಂಘದ ಪದಾಧಿಕಾರಿಗಳು ಬಂದರೆ, ಮುಖ್ಯ ಮಂತ್ರಿ ಭೇಟಿಯಾಗಿ ಸಮಸ್ಯೆ ಅರ್ಥ ಮಾಡಿಸುವ ಕೆಲಸ ಮಾಡುತ್ತೇನೆಂದು ಹೇಳಿದರು.

ನಿವೃತ್ತ ನೌಕರರ ಸಂಘದ ರಾಜ್ಯಾಧ್ಯಕ್ಷ ಕೆ.ಭೈರಪ್ಪ ಅವರು ಮಾತನಾಡಿ, ರಾಜ್ಯದಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ನಿವೃತ್ತ ನೌಕರರು ಮತ್ತು ಒಂದು ಲಕ್ಷಕ್ಕೂ ಅಧಿಕ ಪಿಂಚಣಿದಾರರು ಇದ್ದಾರೆ. ಅವರ ಅನೇಕ ಸಮಸ್ಯೆಗಳು ಇಂದಿಗೂ ಬಗೆಹರಿಯದೆ ಉಳಿದಿವೆ ಎಂದು ಬೇಸರ ವ್ಯಕ್ತಪಡಿಸಿ ದರು. ನಿವೃತ್ತ ನೌಕರರು ಹಾಗು ಪಿಂಚಣಿದಾರರಿಗೆ ಆರೋಗ್ಯ ಭಾಗ್ಯ ಯೋಜನೆಯನ್ನು ತಕ್ಷಣ ಜಾರಿಗೆ ತರಬೇಕು. ಕಾಲಮಾನಕ್ಕೆ ತಕ್ಕಂತೆ ನಿವೃತ್ತಿ ವೇತನ ಪರಿಷ್ಕರಣೆ ಮಾಡಿ ಜಾರಿಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಈ ವೇಳೆ ಸಂಧ್ಯಾಕಿರಣ ಯೋಜನೆಯನ್ನು ಜಾರಿಗೆ ತರಬೇಕು. ವೈದ್ಯಕೀಯ ಚಿಕಿತ್ಸೆಗೆ ಹೆಚ್ಚಿನ ಸೌಲಭ್ಯ ಒದಗಿಸಬೇಕು. 7ನೇ ವೇತನ ಆಯೋಗದ ವರದಿಯಲ್ಲಿ ನಿವೃತ್ತ ನೌಕರರಿಗೆ ಸೂಕ್ತ ಆರ್ಥಿಕ ಸೌಲಭ್ಯ ಕಲ್ಪಿಸಬೇಕು. 70ರಿಂದ 80 ವರ್ಷದ ನಿವೃತ್ತ ನೌಕರರಿಗೆ ಶೇ.10ರಷ್ಟು ಹೆಚ್ಚುವರಿ ಆರ್ಥಿಕ ನೆರವು ನೀಡಬೇಕೆಂದು ಮನವಿ ಮಾಡಿದರು.

ಸಮಾವೇಶದಲ್ಲಿ ವಿವಿಧ ಜಿಲ್ಲೆಗಳ ಪದಾಧಿಕಾರಿಗಳು, ನಿವೃತ್ತ ನೌಕರರು ಹಾಗು ಪಿಂಚಣಿ ದಾರರು ತಮ್ಮ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಪ್ರಸ್ತಾಪಿಸಿದರು. ಮೈಸೂರು ವಿಭಾಗದ

**ಪಿಂಚಣಿದಾರರಿಗೆ ಆರೋಗ್ಯ ಭಾಗ್ಯ ಯೋಜನೆಯನ್ನು ಜಾರಿಗೆ ತರುವುದರ ಜೊತೆಗೆ, ಶವ ಸಂಸ್ಕಾರಕ್ಕೆ ಕನಿಷ್ಠ 10 ಸಾವಿರ ರೂ. ನೆರವು ನೀಡಬೇಕು. ಈ ಸೌಲಭ್ಯಗಳನ್ನು ಕಲ್ಪಿಸುವುದು ಸರ್ಕಾರದ ಕರ್ತವ್ಯವಾಗಿದ್ದು, ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟದ ರೂಪುರೇಷೆಗಳನ್ನು ರೂಪಿಸಲಾಗುವುದು.**

**-ಕೆ.ಭೈರಪ್ಪ, ನಿವೃತ್ತ ನೌಕರರ ಸಂಘದ ರಾಜ್ಯಾಧ್ಯಕ್ಷ**

ಸುಮಾರು ಎಂಟು ಜಿಲ್ಲೆಗಳ ನಿವೃತ್ತ ನೌಕರರು ಹಾಗೂ ಪಿಂಚಣಿದಾರರು ಸಮಾವೇಶದಲ್ಲಿ ಭಾಗವಹಿಸಿದ್ದರು.

ನಿವೃತ್ತ ನೌಕರರ ಸಂಘದ ಅಧ್ಯಕ್ಷ ಆನಂತರಾಮು, ಪ್ರಧಾನ ಕಾರ್ಯದರ್ಶಿ ರಂಗೇಗೌಡ, ಖಜಾಂಚಿ ಎಸ್.ಎಂ.ಆನಂದಪ್ಪ, ಉಪಾಧ್ಯಕ್ಷ ಶ್ರೀನಿವಾಸ್, ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಉಪಾಧ್ಯಕ್ಷ ಕೆ.ಎಂ.ಶ್ರೀನಿವಾಸ್ ಹಾಜರಿದ್ದರು.

# ಆಲೂರಿನಲ್ಲಿ ವಶಪಡಿಸಿಕೊಂಡಿದ್ದು 3 ಟನ್ ಅಕ್ಕಿ

• ಪ್ರಜೋದಯ ವರದಿ

**ಹಾಸನ:** ಆಲೂರು ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 75ರ ಚೌಳಗೆರೆ ಟೋಲ್ ಗೇಟ್‌ನಲ್ಲಿ ಸೋಮವಾರ ಪೊಲೀಸರು 3 ಟನ್‌ನಷ್ಟು ಅಕ್ಕಿ ವಶಕ್ಕೆ ಪಡೆದಿದ್ದಾರೆ.

ಬೆಳಗಿನ ಜಾವ 6.45ರ ಸಮಯದಲ್ಲಿ ಅಕ್ರಮ ಅಕ್ಕಿ ಸಾಗಾಟದ ಆರೋಪದ ಮೇರೆಗೆ ಪತ್ರಕರ್ತರೊಬ್ಬರು 112 ಸಹಾಯವಾಣಿಗೆ ನೀಡಿದ ದೂರು ಆಧರಿಸಿ ಪೊಲೀಸರು ಎರಡು ಲಾರಿಗಳನ್ನು ವಶಕ್ಕೆ ಪಡೆದಿದ್ದರು.

ಲಾರಿಯಲ್ಲಿರುವುದು ಪಡಿತರ ಅಕ್ಕಿಯೇ ಅಥವಾ ಬೇರೆ ಇಲಾಖೆಗೆ ಸೇರಿದೆಯೇ ಎಂಬುದನ್ನು ಪರಿಶೀಲಿಸಲು ಆಹಾರ ಇಲಾಖೆ ಉಪನಿರೀಕ್ಷಕರಿಗೆ ಕೋರಲಾಗಿತ್ತು. ರಾತ್ರಿ 10 ಗಂಟೆ ವರೆಗೆ ಠಾಣೆ ಆವರಣದಲ್ಲೇ ಎರಡು ಲಾರಿಗಳಿಂದ ಅಕ್ಕಿ ಮೂಟೆಗಳನ್ನು ಕೆಳಗಿಳಿಸಿ ತೂಕ ಹಾಕಿದ್ದು ಒಂದು ಲಾರಿಯಿಂದ 50 ಕೆ.ಜಿ. ಸಾಮರ್ಥ್ಯದ 290 ಮೂಟೆ ಹಾಗು ಮತ್ತೊಂದು ವಾಹನದಿಂದ 280ಮೂಟೆಗಳು ಪತ್ತೆಯಾಗಿದೆ.

ಕೆಎ20ಎಸಿ2623 ನಂಬರ್‌ನ ವಾಹನದಲ್ಲಿ ದೊರೆತ 290 ಚೀಲ ಅಕ್ಕಿಯಲ್ಲಿ 209 ಚೀಲ ಕುಸಲಕ್ಕಿ, 100 ಚೀಲ ಸಾಮಾನ್ಯ ಅಕ್ಕಿಯಾಗಿದೆ. ಕೆಎ52ಬಿ 6239 ನಂಬರ್‌ನ ಲಾರಿಯಲ್ಲಿ ಸಿಕ್ಕ 280 ಚೀಲಗಳಲ್ಲಿ 65 ಚೀಲ ಕುಸಲಕ್ಕಿ, 215 ಚೀಲ ಸಾಮಾನ್ಯ ಅಕ್ಕಿಯಾಗಿದೆ. ಎರಡು ವಾಹನಗಳಿಂದ 20 ಚೀಲಗಳನ್ನು ಪರಿಶೀಲಿಸಿದಾಗ ಅದು ಸರ್ಕಾರದಿಂದ ಸಾರ್ವಜನಿಕ ವಿತರಣಾ ಪದ್ಧತಿಯಡಿ ನೀಡಲಾಗುವ ಅನ್ನಭಾಗ್ಯ ಅಕ್ಕಿ ಎಂದು ಮೇಲ್ನೋಟಕ್ಕೆ ಕಂಡುಬಂದಿದೆ. ಆದರೆ, ಜಿಲ್ಲೆಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಕುಸಲಕ್ಕಿ ವಿತರಿಸುವುದಿಲ್ಲ. ಮಂಗ ಳೂರು ಭಾಗದಲ್ಲಿ ಪಡಿತರ ಯೋಜನೆಯಡಿ ಕುಸಲಕ್ಕಿಯನ್ನು ನೀಡುತ್ತಾರೆಂಬ ಮಾಹಿತಿ ಇದ್ದು ಸರ್ಕಾರದ ಅನ್ನಭಾಗ್ಯ ಯೋಜನೆ ಅಕ್ಕಿಯನ್ನೇ ಅಕ್ರಮವಾಗಿ ಸಾಗಿಸುತ್ತಿದ್ದರೆಂಬ ಸಂಶಯ ಬಲವಾಗಿದೆ.

ಈ ಸಂಬಂಧ ಆಹಾರ ನಿರೀಕ್ಷಕ ಕೆ.ಸಿ.ಮೋಹನ್‌ಕುಮಾರ್ ಅವರು ನೀಡಿರುವ ದೂರು ಆಧರಿಸಿ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ. ಎರಡೂ ಲಾರಿ ಚಾಲಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

**ತನಿಖೆ ಬಳಿಕ ಸತ್ಯಾಂಶ ಬೆಳಕಿಗೆ**

ಸೋಮವಾರ ಪೊಲೀಸರ ಮಾಹಿತಿ ಮೇರೆಗೆ ಠಾಣೆಗೆ ತೆರಳಿ ಅಕ್ಕಿ ಪರಿಶೀಲಿಸಲಾಗಿದೆ.ಪಡಿತರ ಅಕ್ಕಿಯೋ ಅಲ್ಲವೋ ಎಂಬುದು ಪೂರ್ಣ ತನಿಖೆ ಬಳಿಕ ಗೊತ್ತಾಗುತ್ತದೆ. ವಾಹನ ಚಾಲಕ ಹಾಗು ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಪಾರದರ್ಶಕ ತನಿಖೆಗಾಗಿ ಪೊಲೀಸರಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತೇವೆಂದು ತಾಲ್ಲೂಕು ಆಹಾರ ನಿರೀಕ್ಷಕ ಕೆ.ಸಿ.ಮೋಹನ್‌ಕುಮಾರ್ ತಿಳಿಸಿದರು.

## ದನಗಳ ಜಾತ್ರೆಯಲ್ಲಿ ಮೂಲಭೂತ ಸೌಕರ್ಯಗಳಿಗೆ ಸಹಕಾರ

• ಪ್ರಜೋದಯ ವರದಿ

**ಹಾಸನ:** ಸಂತೆ ಮೈದಾನದಲ್ಲಿ ನಡೆಯುತ್ತಿರುವ ದನಗಳ ಜಾತ್ರೆಗೆ ಶಾಸಕ ಹೆಚ್.ಪಿ.ಸ್ವರೂಪ್ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಕಳೆದ ಹಲವು ವರ್ಷಗಳಿಂದ ನಿಂತಿದ್ದ ದನಗಳ ಜಾತ್ರೆಗೆ ನನ್ನ ಅವಧಿಯಲ್ಲಿ ಮರು ಜೀವ ತುಂಬುವ ಕೆಲಸ ಮಾಡಿದ್ದೇನೆ. ಅದರ ಜೊತೆಗೆ ದನಗಳ ಜಾತ್ರೆಗೆ ಅಗತ್ಯವಿರುವ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಮಹಾನಗರ ಪಾಲಿಕೆ ಹಾಗು ನನ್ನ ಸಹಕಾರದಲ್ಲಿ ಯಶಸ್ವಿಯಾಗಿ ನಡೆಯುತ್ತಿದೆಂದು ಹೇಳಿದರು.



ದನಗಳ ಜಾತ್ರೆಗೆ ಜಿಲ್ಲೆ ಮಾತ್ರವಲ್ಲದೆ ಹೊರ ಜಿಲ್ಲೆಗಳಿಂದಲೂ ಜೋಡೆತ್ತುಗಳು ಆಗಮಿಸಿದ್ದು, ವ್ಯಾಪಾರ ವಹಿವಾಟು ಕೂಡ ಜೋರಾಗಿ ನಡೆಯುತ್ತಿದೆ. ಜಿಲ್ಲೆಯ ದನಗಳ ಜಾತ್ರೆ ಇತಿಹಾಸವನ್ನು ಪುನರ್ ನಿರ್ಮಾಣ ಮಾಡುವ ಸಲು ವಾಗಿ ಮುಂದಿನ ದಿನಗಳಲ್ಲಿಯೂ ದೊಡ್ಡ ಮಟ್ಟದಲ್ಲಿ ನಡೆಸುವ ಬಗ್ಗೆ ಯೋಚಿಸಿದ್ದೇನೆಂದು ತಿಳಿಸಿದರು. ಈ ವೇಳೆ ರೈತರೊಂದಿಗೆ ಸಮಾಲೋಚನೆ ನಡೆಸಿ, ಎತ್ತುಗಳ ಜೊತೆ ಫೋಟೋ ಕ್ಲಿಕ್ಕಿಸಿಕೊಂಡರು.

## ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾದ ನಿವೃತ್ತ ಯೋಧ

• ಪ್ರಜೋದಯ ವರದಿ



**ಬೇಲೂರು:** ಅನಾರೋಗ್ಯದಿಂದ ಬೇಸತ್ತು ಮಾನಸಿಕ ಖಿನ್ನತೆಗೆ ಒಳಗಾಗಿದ್ದ ನಿವೃತ್ತ ಯೋಧ ರಿವಾಲ್ವಾರ್‌ನಿಂದ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಳೇಬೀಡು ಹೋಬಳಿ ಘಟ್ಟದಹಳ್ಳಿ ಗ್ರಾಮದಲ್ಲಿ ಮಂಗಳ ವಾರ ನಡೆದಿದೆ.

ಗ್ರಾಮದ ಜಿ.ಕೆ.ಕಲ್ಲೇಶ್ (60) ಮೃತರು. ಕೆಲಸದಿಂದ ನಿವೃತ್ತಿರಾಗಿ ಬರುವಾಗಲೇ ರಿವಾಲ್ವಾರ್ ಮಂಜೂರಾತಿ ಮಾಡಿಸಿಕೊಂಡು ಬಂದಿದ್ದರು. ನಿವೃತ್ತಿ ಬಳಿಕ ಕೃಷಿ ಕೆಲಸ ಮಾಡಿಕೊಂಡಿದ್ದರು. ಕೆಲ ವರ್ಷಗಳಿಂದ ಅನಾರೋಗ್ಯಕ್ಕೀಡಾಗಿದ್ದ ಅವರು ಮಾನಸಿಕ ಖಿನ್ನತೆಗೆ ಒಳಗಾಗಿದ್ದರು.

ಅನಾರೋಗ್ಯ ಹಿನ್ನಲೆಯಲ್ಲಿ ಸೂಕ್ತ ಚಿಕಿತ್ಸೆ ಪಡೆಯುತ್ತಿದ್ದರು. ಆದರೂ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿರಲಿಲ್ಲ. ಕಳೆದ ಎರಡು ದಿನಗಳ ಹಿಂದೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಪತ್ನಿ ಬಳಿ ಹೇಳಿಕೊಂಡಿದ್ದರು ಎನ್ನಲಾಗಿದೆ.

ಮಂಗಳವಾರ ಬೆಳಿಗ್ಗೆ ಸಕಲೇಶಪುರ ಪೊಲೀಸ್ ಠಾಣೆಗೆ ಕರೆ ಮಾಡಿ, ನಾನು ಆತ್ಮಹತ್ಯೆ ಮಾಡಿ ಕೊಳ್ಳುತ್ತೇನೆ ಎಂದಿದ್ದಾರೆ. ಕೂಡಲೇ ಸಕಲೇಶಪುರ ಪೊಲೀಸರು, ಹಳೇಬೀಡು ಠಾಣೆಗೆ ಮಾಹಿತಿ ನೀಡಿದರು. ಘಟ್ಟದಹಳ್ಳಿ ಗ್ರಾಮಕ್ಕೆ ಪೊಲೀಸರು ಭೇಟಿ ನೀಡುವಷ್ಟರಲ್ಲಿ ಕಲ್ಲೇಶ್ ವಾಸದ ಮನೆಯಲ್ಲಿಯೇ ಗುಂಡು ಹಾರಿಸಿಕೊಂಡು ಮೃತರಾಗಿದ್ದರು. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ದೇಶ ಸೇವೆ ತುಡಿತ ಹೆಚ್ಚಿತ್ತು**

ಕಲ್ಲೇಶ್ ಅವರಿಗೆ ಇಬ್ಬರು ಪತ್ನಿಯರಿದ್ದಾರೆ. ಮೊದಲ ಪತ್ನಿ ಸೀತಾ ಲಕ್ಷ್ಮಿ ಹಾಗು ಕಲ್ಲೇಶ್ ವಿಚ್ಛೇದನ ಆಗಿತ್ತು. ಸೀತಾಲಕ್ಷ್ಮಿ ಅವರಿಗೆ ಓರ್ವ ಪುತ್ರ ಇದ್ದಾರೆ. ಎರಡನೇ ಪತ್ನಿ ಧರ್ಮಮ್ಮ ಅವರಿಗೆ ಓರ್ವ ಪುತ್ರ ಮತ್ತೋರ್ವ ಪುತ್ರಿ ಇದ್ದಾರೆ. ಕಲ್ಲೇಶ್ ಸಿಆರ್‌ಪಿಎಫ್ ಸೇವೆಯಿಂದ ಮರಳಿದ ಬಳಿಕ ಗ್ರಾಮಸ್ಥರೊಂದಿಗೆ ದೇಶ ಸೇವೆಯ ಕುರಿತು ಸಾಕಷ್ಟು ಚರ್ಚೆ ಮಾಡುತ್ತಿದ್ದರು. ಸೇವೆಯಲ್ಲಿದ್ದಾಗ ಅವರು ಮಾಡಿದ ಸಾಹಸಗಳನ್ನು ವಿವರವಾಗಿ ಹೇಳಿಕೊಳ್ಳುತ್ತಿದ್ದರು. ಇತ್ತೀಚೆಗೆ ಅನಾರೋಗ್ಯದಿಂದ ಮಂಕಾಗಿದ್ದರೆಂದು ಗ್ರಾಮಸ್ಥರು ಹೇಳಿದ್ದಾರೆ.

**157 ಹುದ್ದೆಗಳ ಪೈಕಿ ಸೇವೆಗೆ ಲಭ್ಯವಿರುವ ವೈದ್ಯರು ಕೇವಲ 78 | ಜಿಲ್ಲೆಯಲ್ಲಿ ಶೇ.50ರಷ್ಟು ನೌಕರರ ಅಲಭ**

# ವೈದ್ಯರ ಕೊರತೆ: ಜಾನುವಾರುಗಳಿಗೆ ಸಕಾಲಕ್ಕೆ ಸಿಗದ ಚಿಕಿತ್ಸೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಲ್ಲಿ ವೈದ್ಯರು, ನೌಕರರ ಹಾಗು ಮೂಲಸೌಲಭ್ಯದ ಕೊರತೆಯಿಂದಾಗಿ ಪಶುವೈದ್ಯಕೀಯ ಸೇವೆ ಸೊರಗುತ್ತಿದೆ.

ಪಶುವೈದ್ಯರ ಕೊರತೆಯಿಂದ ರೋಗಕ್ಕೆ ತುತ್ತಾಗುವ ಜಾನುವಾರಿಗೆ ಸಕಾಲಕ್ಕೆ ಚಿಕಿತ್ಸೆ ಕೊಡಿಸಲು ರೈತರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಜಾನುವಾರುಗಳ ತಪಾಸಣೆಗೆ ಇಂದು ಬನ್ನಿ ಎಂದರೆ ನಾಳೆಯೋ, ನಾಡಿದ್ದೋ ಬರುವಂತಾಗಿದೆ. ಹೀಗಾಗಿ ಹಸು,ಕುರಿ, ಮೇಕೆಗಳು ಸಾವನ್ನಪ್ಪುತ್ತಿವೆ.

ಜಿಲ್ಲೆಯಲ್ಲಿ ಶೇ.50 ರಷ್ಟು ಪಶು ವೈದ್ಯರು ಮತ್ತು ಸಿಬ್ಬಂದಿ ಕೊರತೆ ಇದೆ. ಒಟ್ಟು 157 ವೈದ್ಯರ ಅಗತ್ಯವಿದೆ. ಜಿಲ್ಲೆಯಲ್ಲಿ ಕೇವಲ 78 ವೈದ್ಯರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರಾಥಮಿಕ ಪಶು ಆಸ್ಪತ್ರೆಗಳಲ್ಲಿ 33 ಹಾಗು ಪಶು ಚಿಕಿತ್ಸಾಲಯಗಳಲ್ಲಿ 112 ವೈದ್ಯರ ಅಗತ್ಯವಿದೆ. ಈ ವೈದರಲ್ಲಿ ಶೇ.50ರಷ್ಟು ವೈದ್ಯರ ಕೊರತೆ ಇರುವುದರಿಂದ ಈಗಿರುವ ವೈದ್ಯರ ಮೇಲೆ ಹೆಚ್ಚುವರಿ ಕರ್ತವ್ಯದ ಒತ್ತಡ ಹೆಚ್ಚಾಗಿದೆ.

ಜಿಲ್ಲಾ ಕೇಂದ್ರದಲ್ಲಿ ಪಾಲಿ ಕ್ಲಿನಿಕ್, ತಾಲ್ಲೂಕು ಕೇಂದ್ರಗಳಲ್ಲಿ ತಲಾ 1 ಪಶು ಆಸ್ಪತ್ರೆ, ಹೋಬಳಿ ಮಟ್ಟದ ಪಶು ಆಸ್ಪತ್ರೆ, ಪಶು ಚಿಕಿತ್ಸಾಲ ಯಗಳು ಹಾಗು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಹುದ್ದೆಗಳು ಖಾಲಿ ಇರುವು ದರಿಂದ ಜಾನುವಾರಿಗೆ ಚಿಕಿತ್ಸೆ ನೀಡಲು ವಿಳಂಬವಾಗುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಪಶುಗಳಿಗೆ ಚಿಕಿತ್ಸೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುವ ಪಶು ವೈದ್ಯಕೀಯ ಪರೀಕ್ಷಕರು, ಪಶು ವೈದ್ಯ ಕೀಯ ಸಹಾಯ ಕರು ಹಾಗು ಪ್ರಾಣಿ ಸಹಾಯ ಕರಾಗಿ ಕಾರ್ಯನಿರ್ವಹಿಸುವ ಡಿ-ಗ್ರೂಪ್ ನೌಕರರ ಹುದ್ದೆಗಳು ಸಂಖ್ಯೆಯಲ್ಲಿ ಖಾಲಿ ಇರುವುದು ಪಶು ವೈದ್ಯಕೀಯ ಸೇವೆಯಲ್ಲಿ ವ್ಯತ್ಯಯ ಆಗುವಂತೆ ಮಾಡಿದೆ. ಕೆಲವೆಡೆ ಎರಡ್ಮೂರು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಒಬ್ಬರೇ ನೋಡಿಕೊಳ್ಳಬೇಕಾಗುತ್ತಿದೆ. ರೈತರು ಸಹಾಯ ವಾಣಿಗೆ ಕರೆ ಮಾಡಿದಾಗ, ಸಿಬ್ಬಂದಿ ಕೊರತೆ ಇರುವ ಕಡೆ ಆಸ್ಪತ್ರೆಗೆ ಬೀಗ ಹಾಕಿ ಹೋಗ ಬೇಕಾಗುತ್ತಿದೆ. ಇದೇ ವೇಳೆಯಲ್ಲಿ ಬೇರೆ ರೈತರು ಜಾನುವಾರನ್ನು ಆಸ್ಪತ್ರೆಗೆ ಕರೆದು ಕೊಂಡು ಬಂದರೆ ವೈದ್ಯರ ದಾರಿ ಕಾಯಬೇಕಾಗುತ್ತಿದೆ.

ಕೆಲ ಬಾರಿ ವೈದ್ಯರು ಒಂದು ಕಡೆ ಕೆಲಸ ಮುಗಿಸಿ ಇನ್ನೊಂದು ಕಡೆಗೆ ಹೋಗುವಷ್ಟರಲ್ಲಿ ರೋಗ ಪೀಡಿತ, ಅಪಘಾತಕ್ಕೊಳಗಾದ ಜಾನುವಾರು ಸಾವನ್ನಪ್ಪುತ್ತಿವೆ. ಚಿಕಿತ್ಸೆ ನೀಡಲು ವಿಳಂಬವಾಗಿದ್ದ ರಿಂದಲೇ ಜಾನುವಾರು ಮೃತ ಪಟ್ಟಿದೆ ಎಂದು ರೈತರು ಆರೋಪಿ ಸುತ್ತಿರುವುದು ವೈದ್ಯರಿಗೂ ತಲೆನೋವಾಗಿ ಪರಿಣಮಿಸಿದೆ.

**ವೈದ್ಯರ ಮೇಲೆ ಕಾರ್ಯದ ಒತ್ತಡ**

ಎರಡ್ಮೂರು ಜನರು ಮಾಡಬೇಕಾದ ಕೆಲಸವನ್ನು ಒಬ್ಬರೇ ನಿಭಾಯಿಸ ಬೇಕಾಗಿರುವುದರಿಂದ ಪಶು ವೈದ್ಯರೂ ಕೆಲಸದ ಒತ್ತಡದಿಂದ ಬಳಲುತ್ತಿದ್ದಾರೆ. ಕೆಲವೆಡೆ ಪ್ರಾಣಿ ಸಹಾಯಕರು ಇಲ್ಲದಿರುವುದರಿಂದ ಚಿಕಿತ್ಸೆಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ವೈದ್ಯರೇ ಮಾಡಿಕೊಳ್ಳಬೇಕಾಗುತ್ತಿದೆ. ಜಾನುವಾರು ಹಿಡಿದುಕೊಳ್ಳಲು ಸಹಾಯಕರಿಲ್ಲದ ಕಡೆ ಚಿಕಿತ್ಸೆ ನೀಡುವಾಗ ಏಟು ತಿನ್ನಬೇಕಾದ ಪ್ರಸಂಗವೂ ಎದುರಾಗುತ್ತಿದೆ.

**ಲಸಿಕಾ ಕಾರ್ಯ ಪೂರ್ಣ**

ಜಾನುವಾರುಗಳನ್ನು ಹೆಚ್ಚಾಗಿ ಕಾಡುವ ಸಾಂಕ್ರಾಮಿಕ ರೋಗಗಳಾದ ಕರುಳುಬೇನೆ, ಕಾಲುಬಾಯಿ ಜ್ವರ, ಚರ್ಮಗಂಟು ರೋಗಗಳಿಗೆ ಈಗಾಗಲೇ ಲಸಿಕೆ ನೀಡುವ ಕಾರ್ಯ ಜಿಲ್ಲೆಯಲ್ಲಿ ಪೂರ್ಣಗೊಳಿಸಲಾಗಿದೆ.



### ಸ್ಪಂದಿಸದ ಸಂಚಾರಿ ಪಶು ಚಿಕಿತ್ಸಾಲಯ

ಪ್ರತಿ ತಾಲ್ಲೂಕಿನಲ್ಲೂ ಸಂಚಾರಿ ಪಶು ಚಿಕಿತ್ಸಾಲಯ ಇದೆ. ಅದರಲ್ಲಿ ವೈದ್ಯರು ಸ್ಥಳಕ್ಕೆ ತೆರಳಿ ಚಿಕಿತ್ಸೆ ನೀಡಬೇಕಿದೆ. ವೈದ್ಯರ ಕೊರತೆಯಿಂದ ಸಂಚಾರಿ ಪಶು ಚಿಕಿತ್ಸಾಲಯದಿಂದ ಸರಿಯಾದ ಸ್ಪಂದನೆ ಸಿಗುತ್ತಿಲ್ಲ. ಸಂಚಾರಿ ವಾಹನಕ್ಕೆ ಕರೆ ಮಾಡಿದರೂ ಸರಿಯಾದ ಸ್ಪಂದನೆ ದೊರೆಯದೆ ರೈತರು ನೇರವಾಗಿ ವೈದ್ಯರನ್ನು ಸಂಪರ್ಕಿಸುವಂತಾಗಿದೆ. ತುರ್ತು ಸಂದರ್ಭದಲ್ಲಿ ಸಂಚಾರಿ ಪಶು ಚಿಕಿತ್ಸಾ ವಾಹನ ಸಿಕ್ಕರೆ ರೈತರ ಮನೆ ಬಾಗಿಲಿಗೆ ಹೋಗಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪಶು ಇಲಾಖೆ ಕ್ರಮ ಕೈಗೊಳ್ಳಬೇಕಿದೆ.

**ಜಿಲ್ಲೆಯಲ್ಲಿ ಶೇ.50ರಷ್ಟು ಪಶು ವೈದ್ಯರು ಮತ್ತು ನೌಕರರ ಕೊರತೆ ಇದೆ. ಸದ್ಯಕ್ಕೆ ಎಲ್ಲೂ ಜಾನುವಾರುಗಳು ರೋಗಕ್ಕೆ ತುತ್ತಾಗುತ್ತಿರುವುದು ಕಂಡುಬಂದಿಲ್ಲ. ದೂರುಗಳು ಕೇಳಿ ಬಂದ ತಕ್ಷಣ ಸ್ಪಂದಿಸುವ ಕೆಲಸ ಮಾಡಲಾಗುತ್ತಿದೆ. ಕಾಲುಬಾಯಿ, ಚರ್ಮಗಂಟು, ಸಾಂಕ್ರಾಮಿಕ ರೋಗಗಳಿಗೆ ಲಸಿಕೆ ನೀಡುವ ಕಾರ್ಯ ಪೂರ್ಣಗೊಳಿಸಲಾಗಿದೆ.**

**-ಡಾ.ಸಂದರೇಶ್, ಮುಖ್ಯ ಪಶುಚಿಕಿತ್ಸಕ**



# ಬ್ರಷ್ ಬದಲು ಬೇವಿನ ಕಡ್ಡಿ ಬಳಸಿ ನೋಡಿ!

» **ನಮ್ಮ ಹಿರಿಯರು ಅಂದಿನ ಕಾಲದಲ್ಲಿ ಟೂತ್‌ಪೇಸ್ಟ್‌ಗಳನ್ನು ಬಳಸುತ್ತಿರಲಿಲ್ಲ, ಬದಲಾಗಿ ಬೇವು ಮತ್ತು ಆಕೇಶಿಯಾದ ನೈಸರ್ಗಿಕ ಕಡ್ಡಿಗಳನ್ನು ಬಳಸುತ್ತಿದ್ದರು. ಕೆಲವೊಂದು ಹಳ್ಳಿಗಳಲ್ಲಿ ಇಂದಿಗೂ ಈ ಬೇವು ಮತ್ತು ಆಕೇಶಿಯಾದ ಕಡ್ಡಿಗಳನ್ನು ಬಳಸುತ್ತಿದ್ದಾರೆ.**

ಹಲ್ಲುಗಳ ಆರೋಗ್ಯಕ್ಕೆ ಟೂತ್ ಪೇಸ್ಟ್‌ಗಿಂತ ನೈಸರ್ಗಿಕವಾಗಿ ಸಿಗುವ ಬೇವು ಮತ್ತು ಆಕೇಶಿಯಾದ ಕಡ್ಡಿಗಳನ್ನು ಬಳಸುವುದು ಉತ್ತಮ ಎಂದು ಹೇಳಲಾಗುತ್ತದೆ. ನಮ್ಮ ಹಿರಿಯರು ಬಳಸಿದ ಈ ಕ್ರಮವನ್ನು ಅನುಸರಿಸಿದರೆ ಹಲ್ಲುಗಳು ಆರೋಗ್ಯವಾಗಿರುತ್ತವೆ. ಇದನ್ನು ಬಳಸುವ ವಿಧಾನ ಹೇಗೆ? ಇದರ ಪ್ರಯೋಜನಗಳೇನು ಎನ್ನುವುದನ್ನು ನೋಡೋಣ. ಪ್ರತಿದಿನ ಬೆಳಿಗ್ಗೆ ಮತ್ತು ರಾತ್ರಿ ಹಲ್ಲುಜ್ಜುವುದು ಇದ್ದೇ ಇರುತ್ತದೆ. ಹೊಳೆಯುವ ಹಲ್ಲಿಗಾಗಿ ಇಲ್ಲ ಸಲ್ಲದ ಟೂತ್ ಪೇಸ್ಟ್‌ಗಳನ್ನು ಬಳಸುತ್ತೇವೆ. ಆದರೆ ಇದರಿಂದಲೇ ಹಲ್ಲುಗಳು ಹಳದಿ ಬಣ್ಣಕ್ಕೆ ತಿರುಗುವುದು ಮತ್ತು ದುರ್ಬಲ ಒಸಡುಗಳು ಉಂಟಾಗುತ್ತವೆ ಎಂಬುದು ಹೆಚ್ಚಿನವರಿಗೆ ತಿಳಿದಿಲ್ಲ. ಆದರೆ ನಮ್ಮ ಹಿರಿಯರು ಅಂದಿನ ಕಾಲದಲ್ಲಿ ಟೂತ್ ಪೇಸ್ಟ್‌ಗಳನ್ನು ಬಳಸುತ್ತಿರಲಿಲ್ಲ, ಬದಲಾಗಿ ಬೇವು ಮತ್ತು ಆಕೇಶಿಯಾದ ನೈಸರ್ಗಿಕ ಕಡ್ಡಿಗಳನ್ನು ಬಳಸುತ್ತಿದ್ದರು. ಕೆಲವೊಂದು ಹಳ್ಳಿಗಳಲ್ಲಿ ಇಂದಿಗೂ ಈ ಬೇವು ಮತ್ತು ಆಕೇಶಿಯಾದ ಕಡ್ಡಿಗಳನ್ನು ಬಳಸುತ್ತಿದ್ದಾರೆ. ಅವರ ಹಲ್ಲುಗಳು ಇಂದಿಗೂ ಆರೋಗ್ಯವಾಗಿವೆ. ದಾತುನ್ ಎಂಬುದು ಬೇವು, ಆಕೇಶಿಯಾ ಅಥವಾ ಕಾರಂಜಾ ಮುಂತಾದ ಮರಗಳ ಕಡ್ಡಿಗಳಿಂದ ತಯಾರಿಸಿದ ನೈಸರ್ಗಿಕವಾದ – ಹಲ್ಲುಜ್ಜುವ ಬ್ರಷ್, ಇದನ್ನು ಅಗಿಯುವುದರಿಂದ ಹಲ್ಲು ಸ್ವಚ್ಛಗೊಳ್ಳುತ್ತದೆ. ಒಸಡುಗಳಿಗೆ ಉತ್ತಮ ಮಸಾಜ್ ಆಗುತ್ತದೆ. ಇದರ ಜತೆಗೆ ಬ್ಯಾಕ್ಟೀರಿಯಾಗಳನ್ನು ಕೊಲ್ಲುತ್ತದೆ. ಹಲ್ಲುಜ್ಜುವ ಬ್ರಷ್‌ಗಳು ಅಥವಾ ರಾಸಾಯನಿಕ ಪೇಸ್ಟ್‌ಗಳು ಇಲ್ಲದಿದ್ದಾಗ, ಈ ದಾತುನ್ ಬಳಸುತ್ತಿದ್ದರು.

ಇದರ ಪ್ರಯೋಜನಗಳು: ನೈಸರ್ಗಿಕ ನಂಜುನಿರೋಧಕ: ಬೇವು ಮತ್ತು ಆಕೇಶಿಯಾದ ಕಹಿ ಕಡ್ಡಿಗಳು ಬ್ಯಾಕ್ಟೀರಿಯಾ ವಿರೋಧಿ ಮತ್ತು ನಂಜುನಿರೋಧಕ ಗುಣಗಳನ್ನು ಹೊಂದಿವೆ.

ನೈಸರ್ಗಿಕ ಫ್ಲೋಸಿಂಗ್: ಇವುಗಳನ್ನು ಅಗಿಯುವುದರಿಂದ ಅದರ ನಾರುಗಳು ಹಲ್ಲುಗಳ ನಡುವೆ ತೂರಿಕೊಂಡು ಸಿಕ್ಕಿಬಿದ್ದ ಆಹಾರ ಮತ್ತು ಪ್ಲೇಕ್ ಅನ್ನು ತೆಗೆದುಹಾಕಲು ಸಹಾಯ ಮಾಡಿಕೊಡುತ್ತದೆ.

ಒಸಡುಗಳನ್ನು ಬಲಪಡಿಸುವುದು: ದಾತುನ್ ಒಸಡುಗಳನ್ನು ನಿಧಾನವಾಗಿ ಮಸಾಜ್ ಮಾಡುತ್ತದೆ. ಇದು ರಕ್ತ ಪರಿಚಲನೆ ಹೆಚ್ಚಿಸುತ್ತದೆ ಹಾಗೂ ಒಸಡುಗಳನ್ನು ಬಲಪಡಿಸುತ್ತದೆ. ನಿಯಮಿತ ಬಳಕೆಯಿಂದ, ಹಲ್ಲುಗಳ ಹಳದಿ ಬಣ್ಣವೂ ಹೋಗುತ್ತದೆ. ಈ ಕಡ್ಡಿಗಳು ಬಾಯಿಯ ದುರ್ವಾಸನೆಯನ್ನು ನಿವಾರಿಸುತ್ತದೆ. ಬೆಳಿಗ್ಗೆ ಬೇವು ಅಥವಾ ಆಕೇಶಿಯಾದ ತೆಳುವಾದ ಕಡ್ಡಿಯನ್ನು ತೆಗೆದುಕೊಳ್ಳಿ. ಅದರ ಒಂದು ತುದಿಯನ್ನು ಅಗಿಯಿರಿ, ಅದನ್ನು ನಾರಿನಂತೆ ಮಾಡಿ. ನಂತರ ಹಲ್ಲುಗಳ ಮೇಲೆ ನಿಧಾನವಾಗಿ ಉಜ್ಜಿ ಮತ್ತು ಒಸಡುಗಳಿಗೆ ಮಸಾಜ್ ಮಾಡಿ. ದಿನಕ್ಕೆ ಒಮ್ಮೆ ಬಳಸಿದರೆ ಸಾಕು.

## 24-12-2025 ದಿನ ಭವಿಷ್ಯ

**ಮೇಷ:** ನಿಮಗೇನು ಒಳ್ಳೆಯದೆಂದು ನಿಮಗೆ ಮಾತ್ರ ಗೊತ್ತು - ಆದ್ದರಿಂದ ಧೃಢವಾಗಿರಿ ಮತ್ತು ಧೈರ್ಯಶಾಲಿಗಳಾಗಿರಿ ಮತ್ತು ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ ಹಾಗೂ ಫಲಿತಾಂಶಗಳಿಗೆ ಸಿದ್ಧವಾಗಿರಿ. ವ್ಯಾಪಾರವನ್ನು ಬಲಪಡಿಸಲು ಇಂದು ನೀವು ಯಾವುದೇ ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಬಹುದು. ಇದಕ್ಕಾಗಿ ನಿಮ್ಮ ಆಪ್ತ ನಿಮಗೆ ಆರ್ಥಿಕವಾಗಿ ಸಹಾಯ ಮಾಡಬಹುದು.

**ವೃಷಭ:** ಇಂದು ಶಾಂತವಾಗಿ ಒತ್ತಡ ಮುಕ್ತವಾಗಿರಿ. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ. ನಿಮ್ಮ ವಿಚಿತ್ರ ವರ್ತನೆಯ ಹೊರತಾಗಿಯೂ ಸಂಗಾತಿ ಸಹಕಾರಿಯಾಗಿರುತ್ತಾರೆ. ಪ್ರೇಮ ಜೀವನ ರೋಮಾಂಚಕವಾಗಿರುತ್ತದೆ. ಸಹೋದ್ಯೋಗಿಗಳನ್ನು ನಿರ್ವಹಿಸುವಾಗ ಜಾಣತನದ ಅಗತ್ಯವಿದೆ.

**ಮಿಥುನ:** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು ಮತ್ತು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು. ಮಕ್ಕಳು ನಿಮ್ಮ ದಿನವನ್ನು ಕಠಿಣಗೊಳಿಸುತ್ತಾರೆ.

**ಕರ್ಕಾಟಕ:** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ತಮ್ಮ ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ಇಂದು ನಷ್ಟ ಅನುಭವಿಸುವ ಸಾಧ್ಯತೆಯಿದೆ. ಬೆಟ್ಟಿಂಗ್‌ನಿಂದ ದೂರವಿರಲು ನಿಮಗೆ ಸೂಚಿಸಲಾಗಿದೆ. ಪತ್ನಿಯೊಂದಿಗೆ ಶಾಪಿಂಗ್ ಅನ್ನು ಅಪಾರವಾಗಿ ಆನಂದಿಸುತ್ತೀರಿ. ಇದು ನಿಮ್ಮ ನಡುವಿನ ತಿಳುವಳಿಕೆಯನ್ನೂ ಹೆಚ್ಚಿಸುತ್ತದೆ.

**ಸಿಂಹ:** ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಮನೆಯಲ್ಲಿ ಯಾವುದೇ ಬದಲಾವಣೆ ಮಾಡುವ ಮುನ್ನ ನಿಮ್ಮ ಹಿರಿಯರ ಸಲಹೆ ತೆಗೆದುಕೊಳ್ಳಿ ಇಲ್ಲವಾದರೆ ಅದು ಅವರಿಗೆ ಕೋಪ ಮತ್ತು ಅಸಮಾಧಾನವನ್ನು ತರಬಹುದು.

**ಕನ್ಯಾ:** ನಿಮ್ಮ ಆಸಕ್ತಿಗಳನ್ನು ಮುಂದುವರಿಸಲು ಅಥವಾ ನೀವು ತುಂಬ ಆನಂದಿಸುವ ಕೆಲಸಗಳನ್ನು ಮಾಡಲು ಹೆಚ್ಚು ಸಮಯ ಕಳೆಯಬೇಕು. ಆರ್ಥಿಕ ಜೀವನದಲ್ಲಿ ಇಂದು ಸಂತೋಷ ಉಳಿದಿರುತ್ತದೆ. ಇದರೊಂದಿಗೆ ನೀವು ಇಂದು ಸಾಲಗಳಿಂದ ಮುಕ್ತರಾಗಬಹುದು. ಈ ದಿನವು ನಿಮ್ಮ ಪ್ರೀತಿಪಾತ್ರರ ನಗುವಿನಿಂದ ಪ್ರಾರಂಭವಾಗುತ್ತದೆ, ಮತ್ತು ಪರಸ್ಪರರ ಕನಸಿನಲ್ಲಿ ಕೊನೆಗೊಳ್ಳುತ್ತದೆ.

**ತುಲಾ:** ಕುಡಿಯುವ ಮತ್ತು ತಿನ್ನುವಾಗ ಎಚ್ಚರದಿಂದಿರಿ. ಅಸಡ್ಡೆ ನಿಮಗೆ ಅನಾರೋಗ್ಯ ತರಬಹುದು. ವಿದೇಶದಲ್ಲಿ ವ್ಯಾಪಾರ ಮಾಡುವ ಈ ರಾಶಿಚಕ್ರದ ಜನರಿಗೆ ಇಂದು ಸಾಕಷ್ಟು ಹಣದ ಲಾಭವನ್ನು ಪಡೆಯಬಹುದು. ಬ್ಯಾಂಕಿಂಗ್ ಕ್ಷೇತ್ರದಲ್ಲಿನ ವೃತ್ತಿಪರರು ಉತ್ತಮ ವಾರ್ತೆಯನ್ನು ಪಡೆಯುತ್ತಾರೆ.

**ವೃಶ್ಚಿಕ:** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ನಿಮ್ಮ ಸ್ನೇಹಿತರ ಸಹಾಯದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾಗುತ್ತವೆ. ನಿಮ್ಮ ಮನೆಯ ಪರಿಸ್ಥಿತಿ ಸ್ವಲ್ಪ ಅನಿರೀಕ್ಷಿತವಾಗಿರುತ್ತದೆ. ನಿಮ್ಮ ಪ್ರೇಮಮಯ ವೀಕ್ಷಣೆಗಳನ್ನು ಅಭಿವ್ಯಕ್ತಿಗೊಳಿಸಿ. ಬಿಡುವೇಳೆಯಲ್ಲಿ ನೀವು ಯಾವುದೇ ಚಲನಚಿತ್ರವನ್ನು ನೋಡಬಹುದು.

**ಧನು:** ಸಂತೋಷದಿಂದ ತುಂಬಿದ ಒಳ್ಳೆಯ ದಿನ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ನಿಮಗೆ ಹತ್ತಿರವಿರುವ ಯಾರಾದರೂ ಅತ್ಯಂತ ಅನಿರೀಕ್ಷಿತ ಮನಸ್ಥಿತಿಯಲ್ಲಿರುತ್ತಾರೆ. ತಮ್ಮ ಪ್ರೀತಿಪತ್ರರೊಡನೆ ಸಣ್ಣ ಪ್ರಯಾಣ ಕೈಗೊಳ್ಳುವವರು ಅತ್ಯಂತ ಸ್ಮರಣೀಯ ಸಮಯವನ್ನು ಹೊಂದುತ್ತಾರೆ.


**ಮಕರ:** ನಿಮ್ಮ ಅನುಮಾನದ ಪ್ರಕೃತಿ ನಿಮಗೆ ಸೋಲಿನ ಮುಖ ತೋರಿಸಬಹುದು. ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ- ಅಥವಾ ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ. ಅಗತ್ಯವಿದ್ದರೆ ಸ್ನೇಹಿತರು ನಿಮ್ಮ ನೆರವಿಗೆ ಬರುತ್ತಾರೆ. ನೀವು ಜನಪ್ರಿಯರಾಗಿರುತ್ತೀರಿ ಮತ್ತು ಸುಲಭವಾಗಿ ವಿರುದ್ಧ ಲಿಂಗದ ಸದಸ್ಯರ ಸೆಳೆಯುತ್ತೀರಿ.

**ಕುಂಭ:** ನಿಮ್ಮ ಅಸಭ್ಯ ವರ್ತನೆ ನಿಮ್ಮ ಹೆಂಡತಿಯ ಮನಸ್ಸನ್ನು ಹಾಳು ಮಾಡುತ್ತದೆ. ನೀವು ಯಾರನ್ನಾದರೂ ಅಗೌರವದಿಂದ ಕಾಣುವುದು ಹಾಗೂ ಸಂಬಂಧವನ್ನು ಲಘುವಾಗಿ ತೆಗೆದುಕೊಳ್ಳುವುದು ಅಪಾಯಕ್ಕೆ ಅದನ್ನು ತೀವ್ರವಾಗಿ ಘಾಸಿಗೊಳಿಸಬಹುದು ಎಂದು ಅರ್ಥ ಮಾಡಿಕೊಳ್ಳಬೇಕು. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ.

**ಮೀನ:** ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ಹಣಕಾಸು ಲಾಭ ಒಂದಕ್ಕಿಂತ ಹೆಚ್ಚು ಮೂಲಗಳಿಂದ ಬರುತ್ತದೆ. ನಿಮ್ಮ ಸಂಗಾತಿಯ ಆರೋಗ್ಯ ಒತ್ತಡ ಮತ್ತು ಆತಂಕಕ್ಕೆ ಕಾರಣವಾಗಬಹುದು ನೀವು ನಿಜವಾದ ಪ್ರೀತಿ ಕಾಣಲು ಸಾಧ್ಯವಾಗದಿರುವುದರಿಂದ ಪ್ರಣಯಕ್ಕೆ ಉತ್ತಮ ದಿನವಲ್ಲ. ನೀವು ಇತರರ ನೆರವಿಲ್ಲದೆಯೇ ನಿಮ್ಮ ಪ್ರಮುಖ ಕೆಲಸಗಳನ್ನು ನಿಭಾಯಿಸಬಲ್ಲರಿ...

# ಟೈಮ್ ಪಾಸ್ ಮತ್ತು ಫೋಕಸ್ ನಡುವೆ ಸ್ವಾಸ್ಥ್ಯ ಅಡಗಿದೆ!

**■ ನಿಮಗೆ ಬೇಕಾದ ಫಲಿತಾಂಶ ಸಿಗುತ್ತದೆ. ಇದಕ್ಕೆ ರಿವರ್ಸ್ ಸೈಕಾಲಜಿ ಎನ್ನಲಾಗುತ್ತದೆ. ಬುದ್ಧಿವಂತರಿಗೆ ಮಾತ್ರ ಎಂದು ಹಾಕಿದಾಗ ಫಿಲಂ ಹಿಟ್ ಆಗುತ್ತದೆ. ಅದೇ ರೀತಿ ನೀವು ಬುದ್ಧಿವಂತರಾಗಿದ್ದರೆ ಈ ಫಿಲಂ ನೋಡಬೇಡಿ ಎದ್ದು ಹೋಗಿ ಎನ್ನುವ ದಾಷ್ಟಿಕತೆ ಕೂಡ ಕೆಲಸ ಮಾಡುತ್ತದೆ. ಈ ಜಗತ್ತಿನಲ್ಲಿ ಅತ್ಯಂತ ಯಶಸ್ವಿ ವ್ಯಕ್ತಿಗಳನ್ನು ನೋಡಿ, ಅವರು ಮಹತ್ತರವಾದ ಬದಲಾವಣೆಯೇನೂ ಮಾಡುವುದಿಲ್ಲ.**



ವಿಶ್ವರಂಗ ಸಿಕ್ಕ ಸಮಯವನ್ನು ಹೇಗೆ ಉಪಯೋಗಿಸಿಕೊಳ್ಳುತ್ತೇವೆ ಎನ್ನುವುದರ ಆಧಾರದ ಮೇಲೆ ನಾವ್ಯಾರು ಎನ್ನುವ ಪ್ರಶ್ನೆಗೆ ಉತ್ತರ ಅಡಗಿದೆ. ಬದುಕಿನಲ್ಲಿ ಮುಖ್ಯವಾಗಿ ಬೇಕಾಗಿರುವುದು ಫೋಕಸ್. ಅಂದರೆ, ಒಂದು ವಿಷಯದ ಮೇಲೆ ಗಮನ ನೀಡುವುದು, ಅದರ ಆಳಕ್ಕೆ ಇಳಿಯುವುದು ಮತ್ತು ನಿರಂತರತೆ ಕಾಪಾಡಿಕೊಳ್ಳುವುದು. ಇದನ್ನು ಸರಿಯಾಗಿ ಮಾಡಿಬಿಟ್ಟರೆ ಸಾಕು, ನಾವು ಬದುಕಿನಲ್ಲಿ ಸದಾ ಬಯಸುವ ಹಣ ಮತ್ತು ಪ್ರಸಿದ್ಧಿ ತಾವಾಗೇ ನಮ್ಮ ಬಳಿ ಬರುತ್ತವೆ.

ನೀವು ಮಕ್ಕಳನ್ನು ಗಮನಿಸಿ ನೋಡಿ. ಯಾವುದನ್ನು ಮಾಡಬೇಡ ಎಂದು ಹೇಳುತ್ತೀರಿ ಅವರು ಅದನ್ನು ಖಂಡಿತ ಮಾಡುತ್ತಾರೆ. ದೊಡ್ಡವರ ಕಥೆ ಕೂಡ ಸೇಮ್ ಕಣ್ರೀ. ಏಕೆಂದರೆ ಅವರು ದೈಹಿಕವಾಗಿ ಬೆಳೆದು ದೊಡ್ಡವರು ಎನ್ನಿಸಿಕೊಂಡಿರುತ್ತಾರೆ ಅಷ್ಟೆ. ನೀವು ಯಾವುದನ್ನು ಅತ್ಯಂತ ಸ್ಪಷ್ಟ ಧ್ವನಿಯಲ್ಲಿ ಇದು ಸರಿ,

ಹೀಗಾಗಿ ಇದನ್ನು ಮಾಡಿ ಅಥವಾ ಇದು ತಪ್ಪು, ಹೀಗಾಗಿ ಇದನ್ನು ಮಾಡಬೇಡಿ ಎಂದು ಹೇಳಿ ನೋಡಿ. ಅದ್ಯಾರೇ ಇರಲಿ, ಅವರು ನೀವು ಹೇಳಿದ್ದಕ್ಕೆ ತದ್ವಿರುದ್ಧ ಮಾಡುತ್ತಾರೆ. ಹೀಗೇಕೆ? ಮನುಷ್ಯನ ಮಿದುಳು ವರ್ಕ್ ಆಗುವುದು ಹೀಗೆ. ಇದಕ್ಕೆ ದೊಡ್ಡ ಬುದ್ಧಿವಂತರು ಎನ್ನಿಸಿಕೊಂಡವರು ಕೂಡ ಹೊರತಲ್ಲ. ಹೀಗಾಗಿ ನಿಮಗೇನು ಬೇಕು ಅಥವಾ ನೀವು ಬೇರೆಯವರು ಏನು ಮಾಡಲಿ ಎಂದು ಬಯಸುತ್ತೀರಿ ಅದಕ್ಕೆ ವಿರುದ್ಧವಾದ ವಾದವನ್ನು ತೇಲಿಬಿಡಿ ಸಾಕು!

ನಿಮಗೆ ಬೇಕಾದ ಫಲಿತಾಂಶ ಸಿಗುತ್ತದೆ. ಇದಕ್ಕೆ ರಿವರ್ಸ್ ಸೈಕಾಲಜಿ ಎನ್ನಲಾಗುತ್ತದೆ. ಬುದ್ಧಿವಂತರಿಗೆ ಮಾತ್ರ ಎಂದು ಹಾಕಿದಾಗ ಫಿಲಂ ಹಿಟ್ ಆಗುತ್ತದೆ. ಅದೇ ರೀತಿ ನೀವು ಬುದ್ಧಿವಂತರಾಗಿದ್ದರೆ ಈ ಫಿಲಂ ನೋಡಬೇಡಿ ಎದ್ದು ಹೋಗಿ ಎನ್ನುವ ದಾಷ್ಟಿಕತೆ ಕೂಡ ಕೆಲಸ ಮಾಡುತ್ತದೆ. ಈ ಜಗತ್ತಿನಲ್ಲಿ ಅತ್ಯಂತ ಯಶಸ್ವಿ ವ್ಯಕ್ತಿಗಳನ್ನು ನೋಡಿ, ಅವರು ಮಹತ್ತರವಾದ ಬದಲಾವಣೆಯೇನೂ ಮಾಡುವುದಿಲ್ಲ.

ಒನ್ ಪರ್ಸೆಂಟ್ ಚೇಂಜ್ ಎನ್ನುವ ಸ್ಟ್ರಾಟಜಿ ಉಪಯೋಗಿಸುತ್ತಾರೆ. ಸಮಾಜದಲ್ಲಿ ಸದಾ ಚಾಲನೆಯಲ್ಲಿರುವ ಟ್ರೆಂಡ್ ಉಪಯೋಗಿಸಿಕೊಂಡು ಪ್ಯಾಟ್ರನ್ ಬದಲಿಸುತ್ತಾರೆ. ದೊಡ್ಡ ಮಟ್ಟದಲ್ಲಿ ಬದಲಾವಣೆ ಮಾಡಿದರೆ ಜನ ಒಪ್ಪುವುದಿಲ್ಲ. ತಿರುಗಿ ಬೀಳುವ ಚಾನ್ಸ್ ಜಾಸ್ತಿಯಿರುತ್ತದೆ. ಹೀಗಾಗಿ ಅವರು ಒಪ್ಪದಿರುವಷ್ಟು ಬದಲಾವಣೆ ಮಾಡಲು ಎಂದಿಗೂ ಹೋಗಬಾರದು.

ಸರಳವಾಗಿ ಹೇಳಬೇಕೆಂದರೆ, ಮಾಸ್ ಕನೆಕ್ಟ್ ಆಗುವಂತೆ ಇದ್ದರೆ ಅಲ್ಲಿಗೆ ಜಯ. ಜಗತ್ತಿನ ಯಾವ ದೇಶವೇ ಇರಲಿ 10 ರಿಂದ 15 ಪ್ರತಿಶತ ಜನ ಮಾತ್ರ ಯೋಚಿಸುವ, ಮುಂದಿನದನ್ನು ಮನಗಾಣುವ ಶಕ್ತಿ ಹೊಂದಿರುತ್ತಾರೆ. ಉಳಿದ 85 ಪ್ರತಿಶತ ಜನ ಡಮ್ಮಿ. ಈ ಮಾತನ್ನು ನೀವು ಉದ್ಧಟತನ ಎಂದು ಕೊಂಡರೂ ಪರವಾಗಿಲ್ಲ.

ಸತ್ಯ ಹೇಳದೆ ಬೇರೆ ದಾರಿಯಿಲ್ಲ. ಉದಾಹರಣೆಗೆ, ಇವತ್ತು ಮೊಬೈಲ್ ಬಂದಿದೆ, ಹೀಗಾಗಿ ಯುವ ಜನರು ಫೋಕಸ್ ಕಳೆದುಕೊಂಡಿದ್ದಾರೆ ಎನ್ನುವುದು ಶುದ್ಧ ಸುಳ್ಳು. ಮೊಬೈಲ್ ಇಲ್ಲದ ಕಾಲದಲ್ಲಿ ಅದೇಕೆ ಎಲ್ಲರೂ ಐನ್‌ಸ್ಟೀನ್ ಆಗಲಿಲ್ಲ? ಅದೇಕೆ ಎಲ್ಲರೂ ರಿಚ್ ಆಂಡ್ ಫೇಮಸ್ ಆಗಲಿಲ್ಲ? ಅದೆ ಬಿಟ್ಹಾಕಿ, ಅದೇಕೆ ಅವರು ಒಂದು ಸುಂದರ ಬದುಕನ್ನು ಬಾಳಲು ಸಾಧ್ಯವಾಗಲಿಲ್ಲ? ಅದೇಕೆ ಸದಾ ವ್ಯವಸ್ಥೆಯನ್ನು ದೂಷಿಸುತ್ತಾ, ತಮ್ಮ ಹಣೆಬರಹವನ್ನು ಹಳಿಯುತ್ತ ಜೀವನ ಸವೆಸಿದರು? ನೀವು ಶತಮಾನಗಳ ಚರಿತ್ರೆ ತೆಗೆದು ನೋಡಿ, ಇಂದು ಅಂತಲ್ಲ ಎಂದಿನಿಂದಲೂ ಜಗತ್ತಿನ 85/90 ಪ್ರತಿಶತ ಜನರಲ್ಲಿ ಫೋಕಸ್ ಇರುವುದಿಲ್ಲ.

ಮೊಬೈಲ್ ಬೇಡ ಕಣ್ರೀ, ಒಂದು ಕಾಲದಲ್ಲಿ ಜನರು ಪುಸ್ತಕ ಓದುವ ಹುಚ್ಚಿಗೆ ಬಿದ್ದಿದ್ದರು! ಏನೂ ಇಲ್ಲದಿದ್ದರೆ ತಮ್ಮ ಕೈ ಬೆರಳ ಉಗುರು ನೋಡುತ್ತಾ ಜನ ಟೈಮ್ ಪಾಸ್ ಮಾಡುತ್ತಾರೆ. ನಾನು ಚಿಕ್ಕವನಿದ್ದಾಗ ನನ್ನ ಹತ್ತವರಿಗೆ ಬೊಂಬೆ ತಂದುಕೊಡುವ ಆರ್ಥಿಕ ಶಕ್ತಿಯಿರಲಿಲ್ಲ. ನನಗೆ ಅದರ ಬಗ್ಗೆ ಬೇಸರವಿಲ್ಲ. ನನ್ನ ಎಡಗೈ ಮತ್ತು ಬಲಗೈಗಳನ್ನು ಹೊಡೆದಾಟಕ್ಕೆ ಬಳಸುತ್ತಿದ್ದೆ. ಒಂದನ್ನು ಹೀರೋ ಎಂದೂ, ಇನ್ನೊಂದು ಕೈಯನ್ನು ವಿಲನ್ ಎಂದೂ ಊಹಿಸಿಕೊಂಡು ನನ್ನದೇ ಎರಡು ಕೈಗಳ ನಡುವೆ ಹೊಡೆದಾಟ ಏರ್ಪಡಿಸಿ ಮಜಾ ತೆಗೆದುಕೊಂಡು ಟೈಮ್ ಪಾಸ್ ಮಾಡುತ್ತಿದ್ದೆ! ಟೈಮ್ ಪಾಸ್ ಮಾಡೋಕೆ ಮೊಬೈಲ್ ಬೇಕಿಲ್ಲ. ಫೋಕಸ್ ಮಾಡೋಕೆ ಮೊಬೈಲ್ ಅಡ್ಡಿಯಲ್ಲ. ಈ ಎರಡರ ನಡುವೆ ಸಮಾಜದ ಸ್ವಾಸ್ಥ್ಯ ಅಡಗಿದೆ.

ಮೀನಿಗೆ ಇದು ಗಾಳ ಎನ್ನುವುದು ಅರಿವಾಗುವುದಿಲ್ಲ. ಆಹಾರ ಎನ್ನುವ ಭ್ರಮೆಯಲ್ಲಿರುತ್ತದೆ! ಥೇಟ್ ಹಾಗೆ ನಮ್ಮ ಜನ ಮತ್ತು ಸಮಾಜ ಕಣ್ರೀ. ಜಗತ್ತಿನಲ್ಲಿ ಅತಿ ಹೆಚ್ಚು ಬೆಲೆಬಾಳುವುದು ಸಮಯ! ತಮ್ಮ ಸಮಯವನ್ನು ನಯಾಪೈಸೆ ಬದಲಾವಣೆ ತರಲಾಗದ ಚಿತ್ರದ ಸೀನ್ ಡಿಕೋಡ್ ಮಾಡುವುದರಲ್ಲಿ ಕಳೆಯುತ್ತಾರೆ.

ಸಿನಿಮಾ ಇಲ್ಲದಿದ್ದರೆ ಕ್ರಿಕೆಟ್ ಇದ್ದೇ ಇದೆಯಲ್ಲ. ನಿನ್ನೆ ಕೋಲಾರ ಪತ್ರಿಕೆಯ ಐವತ್ತನೇ ವರ್ಷದ ಸುವರ್ಣ ಸಂಭ್ರಮದ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಹೋಗುವ ಅವಕಾಶ ಸಿಕ್ಕಿತ್ತು. ತುಮಕೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಶ್ರೀ ವೀರೇಶಾನಂದರು ಮಾತಿಗೆ ಸಿಕ್ಕಿದ್ದರು. ತಮ್ಮ ಮಾತುಗಳಿಂದ ಕೋಲಾರ ಜನತೆಯನ್ನು ಮಂತ್ರಮುಗ್ಧರನ್ನಾಗಿಸಿದ್ದರು.

ಅವರೊಬ್ಬ ಅತ್ಯುತ್ತಮ ವಾಗ್ಮಿ. ಹತ್ತಾರು ದೇಶಗಳನ್ನು ಕೂಡ ಸ್ವಾಮೀಜಿ ಸುತ್ತಿ ಬಂದಿದ್ದಾರೆ. ಹೀಗಾಗಿ ಜಗತ್ತಿನ ಅಗಾಧತೆಯ ಅರಿವಿದೆ. ಬೇರೆ ಬೇರೆ ರೀತಿ-ರಿವಾಜುಗಳನ್ನು ಪ್ರತ್ಯಕ್ಷ ಕಂಡಿದ್ದಾರೆ. ಹೀಗಾಗಿ ಅವರು ನಮ್ಮ ಸಮಾಜದಲ್ಲಿನ ಹುಳುಕುಗಳನ್ನು ಸ್ಪಷ್ಟವಾಗಿ ಗುರುತಿಸಬಲ್ಲರು. ಆದರೆ ಅವರು ಎತ್ತಿ ಆಡುವುದಿಲ್ಲ, ಬದಲಿಗೆ ಅವುಗಳಲ್ಲಿ ಬದಲಾವಣೆ ತರಲು ಏನು ಮಾಡಬಹುದು ಎನ್ನುವುದರ ಬಗ್ಗೆ ಆಲೋಚಿಸುತ್ತಾರೆ.

ಹೀಗಾಗಿ ಅವರು ಖಾಸಗಿಯಾಗಿ ಹೇಳಿದ ಮಾತುಗಳನ್ನು ಇಲ್ಲಿ ಬರೆಯುತ್ತಿದ್ದೇನೆ. ಇದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯ. ಆದರೆ ನಾವು ಬದಲಾವಣೆಗೆ ಆಲೋಚಿಸುವುದರ ಬದಲು ಅವುಗಳಲ್ಲಿ ವ್ಯಸ್ತರಾಗಿ ಬಿಟ್ಟಿದ್ದೇವೆ.

ಮೂರು ಪಿ ಗಳು ನಮ್ಮ ದೇಶದಲ್ಲಿ ಬಹಳಷ್ಟು ಜನರ ಮೇಲೆ ಪ್ರಭಾವ ಬೀರುತ್ತವೆ. ಇವುಗಳು ಬದಲಾದರೆ ಜನ ಬದಲಾಗುತ್ತಾರೆ ಎಂದರು ಸ್ವಾಮೀಜಿ. ಒಂದು ಪಿಕ್ಚರ್, ಎರಡು ಪ್ರೆಸ್ (ಕೇವಲ ಮುದ್ರಣ ಮಾಧ್ಯಮ ಮಾತ್ರವಲ್ಲ, ಇದರ ಜತೆಗೆ ಡಿಜಿಟಲ್ ಮತ್ತು ದೃಶ್ಯ ಮಾಧ್ಯಮಗಳನ್ನು ಕೂಡ ಸೇರಿಸಿಕೊಳ್ಳಬಹುದು), ಮತ್ತೊಂದು ಪಾಲಿಟಿಕ್ಸ್. ಸ್ವಾಮೀಜಿ ಹೇಳಿದ ಈ ಮೂರು ಪಿ ಗಳ ಮಧ್ಯದಲ್ಲಿ ನಮ್ಮ ಸಮಯವನ್ನು ನಾವು ವ್ಯಯಿಸುತ್ತಿದ್ದೇವೆ ಎನ್ನುವುದು ಮಾತ್ರ ಕಹಿಸತ್ಯ.

ನೇರವಾಗಿ ಇದರಲ್ಲಿ ಭಾಗೀದಾರರಾದವರಿಗೆ ಹಣ, ಹೆಸರು ಸಿಗುತ್ತದೆ. ಅವುಗಳನ್ನು ನೋಡುತ್ತಾ, ಅವುಗಳ ಬಗ್ಗೆ ಮಾತಾಡುತ್ತ ಕುಳಿತವರಿಗೆ ಸಿಕ್ಕಿದ್ದೇನು? ಚೀಪ್ ಡೋಪಮೈನ್. ಆ ಕ್ಷಣದ ಖುಷಿ ಬಿಟ್ಟು ಬೇರೇನೂ ಇಲ್ಲ. ಜಗತ್ತು ಇದರಿಂದ ಎಂದಿಗೂ ಬದಲಾಗುವುದಿಲ್ಲ.

ಮನುಷ್ಯ ಎನ್ನುವ ಪ್ರಾಣಿ ಇಷ್ಟು ದೊಡ್ಡ ವಿಶ್ವದಲ್ಲಿ ಸೂಜಿಯ ಮೊನೆ ಕೂಡ ಅಲ್ಲ ಎನ್ನುವುದು ನನ್ನ ಅಭಿಪ್ರಾಯ. ನಮ್ಮ ಅಭಿಪ್ರಾಯಗಳನ್ನು ರೂಪಿಸುವುದು ನಮ್ಮ ಕಲಿಕೆ. ನಾನು ಎನ್ನುವ ಅಹಂ ನೆತ್ತಿಗೇರದೆ ಇರಲು ವಿಶ್ವದ ಪರಿಕಲ್ಪನೆ ಮತ್ತು ಅಲ್ಲಿ ನಮ್ಮ ಸ್ಥಾನವನ್ನು ನೆನೆಪಿಸಿಕೊಂಡರೆ ಅಷ್ಟು ಸಾಕು, ನಾವು ಸಾಸಿವೆಯೂ ಅಲ್ಲ, ಸೂಜಿಮೊನೆಯೂ ಅಲ್ಲ ಎನ್ನುವುದು ಅರಿವಿಗೆ ಬರುತ್ತದೆ.

ಹೀಗಾಗಿ ಈ ನನ್ನ ನಂಬಿಕೆಯನ್ನು ಜತನದಿಂದ ಕಾಪಾಡಿಕೊಂಡು ಬಂದಿದ್ದೇನೆ. ನಿನ್ನೆ ಸ್ವಾಮೀಜಿ ಅದಕ್ಕೆ ಇನ್ನೊಂದು ಹೊಸ ಆಯಾಮವನ್ನು ಕೂಡ ನೀಡಿದರು- ಮನುಷ್ಯ ಅತಿ ಚಿಕ್ಕ ಪ್ರಾಣಿ, ಸೂಜಿ ಮೊನೆಯೂ ಅಲ್ಲ ಎನ್ನುವ ಮಾತುಗಳು ಸರಿ. ಆದರೆ ಇಷ್ಟೊಂದು ದೊಡ್ಡ ವಿಶ್ವದ ಪರಿಕಲ್ಪನೆ, ಗ್ರಹಿಕೆ ಮಾಡಿಕೊಂಡದ್ದು ಕೂಡ ಅವನೇ ಅಲ್ಲವೇ? ಹೀಗಾಗಿ ಅವನು ದೊಡ್ಡವನು ಕೂಡ ಹೌದು ಎಂದರು.

ಮೇಲಿನ ಎಲ್ಲಾ ಮಾತುಗಳ ಸಾರಾಂಶ- ನಾವು ನಮಗೆ ಸಿಕ್ಕ ಸಮಯವನ್ನು ಹೇಗೆ ಉಪಯೋಗಿಸಿಕೊಳ್ಳುತ್ತೇವೆ ಎನ್ನುವುದರ ಆಧಾರದ ಮೇಲೆ ನಾವ್ಯಾರು ಎನ್ನುವ ಪ್ರಶ್ನೆಗೆ ಉತ್ತರ ಅಡಗಿದೆ ಎನ್ನುವುದೇ ಆಗಿದೆ. ಬದುಕಿನಲ್ಲಿ ಎಲ್ಲದಕ್ಕಿಂತ ಮುಖ್ಯವಾಗಿ ಬೇಕಾಗಿರುವುದು ಫೋಕಸ್. ಒಂದು ವಿಷಯದ ಮೇಲೆ ಗಮನ ನೀಡುವುದು, ಅದರ ಆಳಕ್ಕೆ ಇಳಿಯುವುದು ಮತ್ತು ನಿರಂತರತೆ ಕಾಪಾಡಿಕೊಳ್ಳುವುದು ಪ್ರಮುಖ ಅಂಶ.




ಇದನ್ನು ಸರಿಯಾಗಿ ಮಾಡಿ ಬಿಟ್ಟರೆ ಸಾಕು, ನಾವು ಬದುಕಿನಲ್ಲಿ ಸದಾ ಬಯಸುವ ಮತ್ತು ಅದಕ್ಕಾಗಿ ಹಪಹಪಿಸುವ ಇನ್ನೆರಡು ಅಂಶಗಳು ತಾವಾಗೇ ನಮ್ಮ ಬಳಿ ಬರುತ್ತವೆ. ಹಣ ಮತ್ತು ಪ್ರಸಿದ್ಧಿ ಆ ಎರಡು ಅಂಶಗಳು. ನೀವೇ ಗಮನಿಸಿ ನೋಡಿ, ಜಗತ್ತಿನ 90 ಪ್ರತಿಶತ ಜನರು ಹಣದ ಹಿಂದೆ ಮತ್ತು ಹೆಸರಿನ ಹಿಂದೆ ಸದಾ ಓಡುತ್ತಾರೆ. ಹೀಗಾಗಿ ಅವು ಅವರ ಪಾಲಿಗೆ ಮರೀಚಿಕೆಯಾಗಿ ಉಳಿದುಕೊಳ್ಳುತ್ತವೆ.

ಉಳಿದ ಹತ್ತು ಪ್ರತಿಶತ ಜನ ಹಿಡಿದ ಕೆಲಸದ ಮೇಲೆ ಫೋಕಸ್ ಮಾಡುತ್ತಾರೆ. ಈ ಗಮನಹರಿಸುವಿಕೆ, ವಿಷಯನ ಅವರನ್ನು ಕೋಟಿ ಜನರಿಂದ ಬೇರ್ಪಡಿಸಿಬಿಡುತ್ತದೆ. ಅದು ಅವರಿಗೊಂದು ಹೊಸ ಐಡೆಂಟಿಟಿ ತಂದು ಕೊಡುತ್ತದೆ. ಉಳಿದದ್ದು ನಿರಂತರತೆ ಕಾಯ್ದುಕೊಳ್ಳುವುದು. ಹೀಗಾದಾಗ ಜಗತ್ತು ಪರಿತಪಿಸುವ, ಬಯಸುವ ಹಣ-ಹೆಸರು ಅನ್ಯ ಮಾರ್ಗವಿಲ್ಲದೆ ಇಂಥವರ ದಾರಿಗೆ ಬರುತ್ತವೆ.

ನಾವು ಯಾವ ಊರಿನಲ್ಲಿ ಇದ್ದೇವೆ ಎನ್ನುವುದು ಪ್ರಾಮುಖ್ಯವನ್ನು ಪಡೆದುಕೊಳ್ಳುವುದಿಲ್ಲ. ಅಂದರೆ ಭೌಗೋಳಿಕವಾಗಿ ನಾವು ಎಲ್ಲಿದ್ದರೂ ಅದು ನಮ್ಮ ಸಾಧನೆಗೆ ಅಡ್ಡಿಯಾಗುವುದಿಲ್ಲ. ಹಾಗೆ ನಮ್ಮ ಇಂದಿನ ಹಣಕಾಸು ಪರಿಸ್ಥಿತಿ ಕೂಡ ನಮ್ಮ ಸಾಧನೆಗೆ ಅಡ್ಡಿಯಾಗುವುದಿಲ್ಲ. ಹೀಗೆ ನಾವು ಅದಿಲ್ಲ-ಇದಿಲ್ಲ ಎನ್ನುವುದು ಕೇವಲ ಗೊಣಗಾಟ ಮತ್ತು ಕಾರಣಗಳು ಅಷ್ಟೇ.

ಉಳಿದಂತೆ ನಮ್ಮ ಮತ್ತು ನಮ್ಮ ನಡುವಿನ ಸಾಧನೆಗೆ ಅಡ್ಡಿಯಾಗಿ ನಿಲ್ಲುವುದು ನಮ್ಮ ಮನಸ್ಥಿತಿ, ಸೋಮಾರಿತನ ಮಾತ್ರ. ಕೋಲಾರದಲ್ಲಿ ನನ್ನ ಪಿಯುಸಿ ಸಹಪಾಠಿ ಡಾ.ನರೇಂದ್ರ, ಅಲ್ಲಿನ ಸರಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಮೃದುಭಾಷಿ, ಸಂಸ್ಕಾರವಂತರವರು. ಅವರ ಮಗ ಕುಶಾಲ್ ಐಐಟಿ ಗುವಾಹಟಿಯಲ್ಲಿ ಎಂಜಿನಿಯರಿಂಗ್ ಸೀಟು ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ.

ನಿಮಗೆ ಗೊತ್ತಿರಲಿ, ಪೂರ್ಣ ಭಾರತದಲ್ಲಿ ಐಐಟಿ ಸೀಟುಗಳ ಸಂಖ್ಯೆ 18 ಸಾವಿರ ಚಿಲ್ಲರೆ. ಆದರೆ ಈ ಪರೀಕ್ಷೆಗೆ ಸರಿಸುಮಾರು 15 ರಿಂದ 17 ಲಕ್ಷ ಮಕ್ಕಳು ನೋಂದಣಿ ಮಾಡಿಕೊಳ್ಳುತ್ತಾರೆ. ಇದರರ್ಥ ನೂರರಲ್ಲಿ ಒಬ್ಬ ವಿದ್ಯಾರ್ಥಿ ಮಾತ್ರ ಸೀಟು ಗಳಿಸಿಕೊಳ್ಳಬಲ್ಲ. ಇದು ಭಾರತದಲ್ಲಿ ಅತಿ ಕಠಿಣ ಪರೀಕ್ಷೆಗಳಲ್ಲಿ ಒಂದು ಎಂದು ಹೆಸರುವಾಸಿಯಾಗಿದೆ.

ಐಐಟಿಗೆ ಹೇಗೆ ಸಿದ್ಧತೆ ಮಾಡಿಕೊಂಡೆ? ಹೇಗೆ ಕ್ರ್ಯಾಕ್ ಮಾಡಿದೆ? ಎನ್ನುವ ನನ್ನ ಪ್ರಶ್ನೆಗೆ ಆತನದು ಒಂದೇ ಉತ್ತರ- ಫೋಕಸ್ ಮತ್ತು ಪರಿಶ್ರಮ ಹಾಕಿ ಓದುವುದು ಅಷ್ಟೇ. ಯಾವ ಕಾಲೇಜು, ಕೋಚಿಂಗ್ ಸೆಂಟರ್ ಕೂಡ ಏನೂ ಮಾಡುವುದಿಲ್ಲ ಎನ್ನುವುದು! ನಾವಿರುವ ಜಾಗ, ನಮ್ಮ ಪರಿಸ್ಥಿತಿ ಲೆಕ್ಕಕ್ಕೆ ಬರುವುದಿಲ್ಲ.

ನಮ್ಮಲ್ಲಿನ ಆತ್ಮಬಲವಷ್ಟೆ ಮುಖ್ಯವಾಗುತ್ತದೆ ಎನ್ನುವ ನಂಬಿಕೆಗೆ ಮತ್ತಷ್ಟು ಬಲ ಬಂದಿತು. ಇದನ್ನೇ ನಾನು ಸದಾ ಲುಕ್ ಇನ್‌ವರ್ಡ್ ಎನ್ನುತ್ತೇನೆ. ಭಗವಂತ ನಮಗೇನು ಬೇಕು ಎಲ್ಲವನ್ನೂ ನಮ್ಮ ಇಟ್ಟನೆ. ನಮಗೇನು ಬೇಕು ಎನ್ನುವ ನಿಖರತೆ ನಮಗಿರಬೇಕು ಅಷ್ಟೇ. ಆದರೆ ನಾವು? ನಮಗೇನು ಬೇಕು ಎನ್ನುವುದನ್ನು ಕುರಿತು ಕೂಡ ಯೋಚಿಸಲಾಗದ ಮಟ್ಟಕ್ಕೆ ಇಳಿದಿದ್ದೇವೆ.

ಡಿವಿಜಿ ಅವರು ತಮ್ಮ ಕಗ್ಗವೊಂದರಲ್ಲಿ ಭಗವಂತ ನಾವು ಕೇಳಿದ್ದೇ ಕೊಡುತ್ತಾನೆ ಎನ್ನುವ ಗ್ಯಾರಂಟಿ ಇಲ್ಲ. ಆದರೆ ನಮಗೂ ಏನು ಕೇಳಬೇಕು ಎನ್ನುವ ನಿಖರತೆ ಮತ್ತು ಅರಿವಿಲ್ಲ ಎನ್ನುತ್ತಾರೆ. ಈ ಮಾತುಗಳು ಮೊಬೈಲ್ ಬರುವುದಕ್ಕೆ ಮುಂಚೆ ಹೇಳಿದ್ದು!

ಸಮಾಜದಲ್ಲಿನ 85/90 ಪ್ರತಿಶತ ಜನ ಬದುಕು ಸವೆಸುವುದು ಹೀಗೇ ಅಲ್ಲವೇ? ಕೊನೆಗೂ ನಮಗೇನು ಬೇಕು, ನಮ್ಮ ಸಮಯವನ್ನು ಹೇಗೆ ಸ್ವಕಲ್ಯಾಣ ಮತ್ತು ಲೋಕಕಲ್ಯಾಣಕ್ಕೆ ಬಳಸಿಕೊಳ್ಳಬೇಕು ಎನ್ನುವ ನಿಖರತೆ ನಮ್ಮ ಹುಟ್ಟಬೇಕು. ಹೊರಗಿನ ಅಂಶಗಳು ಪ್ರೇರಣೆಯನ್ನು ಮಾತ್ರ ನೀಡಬಲ್ಲವು.

**- ರಂಗಸ್ವಾಮಿ** ಎಂ

# ಅತ್ತೆ ಸೊಸೆ ದ್ವೇಷದ ಕಥೆ

ತಮಗಿದ್ದ ಒಬ್ಬನೇ ಮುದ್ದಿನ ಮಗನಿಗೆ ಒಳ್ಳೆಯ ಮನೆತನದ ಹುಡುಗಿಯೊಂದಿಗೆ ಮದುವೆ ಮಾಡಿ ಸೊಸೆಯನ್ನು ಮನೆಗೆ ಕರೆ ತಂದರು ಒಬ್ಬ ತಂದೆ ತಾಯಿಗಳು. ಮದುವೆಯಾಗಿ ಸ್ವಲ್ಪ ದಿನಗಳವರೆಗೂ ಅತ್ತೆ ಸೊಸೆ, ಚೆನ್ನಾಗಿ ಹೊಂದಿಕೊಂಡಿದ್ದರು. ನಂತರ ಸಣ್ಣ ಪುಟ್ಟ ಜಗಳದಿಂದ, ದೊಡ್ಡದಾಗುತ್ತಾ ಹೋಯಿತು. ಕೂತರೆ ನಿಂತರೆ ಜಗಳವಾಡತೊಡಗಿದರು. ಮನೆಯಲ್ಲಿರುವವರಿಗೆಲ್ಲಾ ದೊಡ್ಡ ರಗಳೆ ಎನಿಸತೊಡಗಿತು. ಮಗನಿಗಂತೂ ಹುಚ್ಚು ಹಿಡಿಯುವಷ್ಟು ಕಿರಿ ಕಿರಿಯಾಗುತ್ತಿತ್ತು. ಆತ ಪಾಪ, ಹೆಂಡತಿಗೆ ಬುದ್ಧಿ ಹೇಳಲಾರ, ಇತ್ತ ತಾಯಿಯನ್ನೂ ಸಮಾಧಾನ ಪಡಿಸಲಾರದೆ, ಒದ್ದಾಡುತ್ತಿದ್ದ. ಇದೇ ಚಿಂತೆಯಲ್ಲಿ ಮಾನಸಿಕವಾಗಿ, ಸೊರಗತೊಡಗಿದ.

ಒಮ್ಮೆ ತನ್ನ ಸ್ನೇಹಿತನಲ್ಲಿ ತನ್ನ ದುಃಖವನ್ನು ಹೇಳಿಕೊಂಡ. ಸ್ನೇಹಿತನ ಸಮಸ್ಯೆಯನ್ನು ಕೇಳಿಸಿಕೊಂಡ ಗೆಳಯ ಅವನಿಗೊಂದು ಸಲಹೆ ನೀಡಿದ, ಪಕ್ಕದ ಊರಿನಲ್ಲಿ, ಒಳ್ಳೆಯ ಸಾಧನೆ ಮಾಡಿದ ಒಬ್ಬರು ಯೋಗಿಗಳಿದ್ದಾರೆ, ಅವರು ಇಂತಹ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸುತ್ತಾರೆ ಎಂದು. ಇದೊಂದು ಪ್ರಯೋಗ ಮಾಡಿಯೆ ಬಿಡೋಣವೆಂದು, ತನ್ನ ಹೆಂಡತಿಯನ್ನು ಹೇಗೊ ಒಪ್ಪಿಸಿ ಆ ಯೋಗಿಗಳ ಬಳಿಗೆ ಕರೆದೊಯ್ದ. ಅವರು ಮೊದಲು ಗಂಡನಿಂದ ಎಲ್ಲಾ ವಿಷಯಗಳನ್ನೂ ಕೇಳಿ ತಿಳಿದುಕೊಂಡರು. ನಂತರ ಅವನನ್ನು ಹೊರಗೆ ಕಳಿಸಿ, ಅವನ ಹೆಂಡತಿಯನ್ನು ಒಳಗೆ ಕರೆದರು. ಆಕೆಯೊಡನೆ, ಸಾಮಾನ್ಯವಾಗಿ ಎಲ್ಲರೂ ಹೇಳುವಂತೆ, ಹೀಗೆ ಹಿರಿಯರೊಡನೆ ಜಗಳ ಮಾಡುವುದು ಸರಿಯಲ್ಲ, ಅವರಿಗೆ ತೊಂದರೆ ಕೊಟ್ಟರೆ, ನಮಗೆ ಒಳ್ಳೆಯದಾಗುವುದಿಲ್ಲವೆಂದು ಹೇಳಿದರು. ಇದನ್ನು ಕೇಳಿದ ಆಕೆ ಕೋಪದಿಂದ ಈ ರೀತಿಯ ಬೋಧನೆ ಮಾಡಲು ನನ್ನನ್ನು ಕರೆಸಿದ್ದೀರಾ? ನನಗೆ ಗೊತ್ತು ನೀವೆಲ್ಲಾ ಸೇರಿ ನನ್ನ ಮೇಲೆ ಸಂಚು ನೆಡೆಸುತ್ತಿದ್ದೀರ. ನನಗೆ ನಿಮ್ಮಗಳ ಬೋಧನೆಯ ಅವಶ್ಯಕತೆ ಇಲ್ಲಾ, ಎಂದು ಅಲ್ಲಿಂದ ಹೊರಡ ತೊಡಗಿದಳು. ಆಗ ಯೋಗಿಗಳು ಅಮ್ಮಾ ಸ್ವಲ್ಪ ಕುಳಿತುಕೊ, ನಿನಗೆ ನನ್ನದೊಂದು ಸಲಹೆ ಇದೆ. ಬೇಕಾದರೆ ಒಪ್ಪಿಕೊ, ಇಲ್ಲದಿದ್ದರೆ, ಖಂಡಿತವಾಗಿಯೂ ಇಲ್ಲಿಂದ ಹೊರಡಬಹುದು, ಎಂದರು.

ಆಕೆ ಏನದು ಎನ್ನುತ್ತ ಅಲ್ಲೇ ಕುಳಿತಳು. ನೋಡಮ್ಮಾ, ನಿನಗೆ ನಿನ್ನ ಅತ್ತೆಯೇ ತೊಂದರೆ ತಾನೇ? ಆಕೆಯನ್ನೇ ಇಲ್ಲದ ಹಾಗೆ ಮಾಡಬಹುದು, ಆಮೇಲೆ ನಿನಗೆ ಯಾವ ಚಿಂತೆಯೂ ಇರುವುದಿಲ್ಲ, ಎಂದು ಅವಳ ಕಿವಿಯಲ್ಲಿ ಗುಟ್ಟು ಹೇಳುವಂತೆ ಹೇಳಿದರು. ಅದು ಸರಿ, ಆದರೆ ಅವಳು ಇನ್ನೂ ಗಟ್ಟಿಯಾಗೇ ಇದ್ದಾಳಲ್ಲ? ಹೇಗೆ ಅವಳನ್ನು ಇಲ್ಲವಾಗಿಸುವುದು, ಎಂದಳು ಸೊಸೆ.

ನೋಡು ನನ್ನ ಹತ್ತಿರ ಒಂದು ವಿಷ ಇದೆ, ಅದನ್ನು ಪ್ರತಿದಿನ ಬೆಳಿಗ್ಗೆ, ಅರ್ಧ ಚಮಚ ಹಾಲಿನಲ್ಲಿ ಬೆರಸಿ ಅವಳಿಗೆ ಕೊಡು, ಅದೊಂದು ವಿಶೇಷ ರೀತಿಯ ವಿಷ. ಆಕೆ ತಕ್ಷಣ ಸತ್ತರೆ, ನಿನ್ನ ಮೇಲೇ ಅಪವಾದ ಬರುತ್ತದೆ, ಅದಕ್ಕೆ ನಿಧಾನವಾಗಿ ಸ್ವಲ್ಪ ಸ್ವಲ್ಪವೇ, ವಿಷ ಬೆರೆತು ಒಂದು ವರ್ಷದ ಒಳಗಾಗಿ ಅವಳು ಸಾಯುತ್ತಾಳೆ. ಅದೂ ಅಲ್ಲದೇ, ಯಾವ ವೈದ್ಯರಿಗೂ ಈ ವಿಷವನ್ನು ಪತ್ತೆ ಮಾಡುವುದು ಸಾಧ್ಯವಿಲ್ಲ. ಆಗ ನಿನ್ನ ಮೇಲೆ ಯಾರಿಗೂ ಸಂಶಯವೂ ಬರುವುದಿಲ್ಲ ಎಂದರು. ಸೊಸೆಗೆ ತಡೆಯಲಾರದಷ್ಟು ಸಂತೋಷವಾಯಿತು. ಹಾಗಾದರೆ ಆ ಪುಡಿಯನ್ನು ಈಗಲೇ ಕೊಡಿ ನಾಳೆಯಿಂದಲೇ, ಅದರ ಪ್ರಯೋಗ ಮಾಡುತ್ತೇನೆ, ಎಂದಳು. ಆಗ ಯೋಗಿಗಳು, ಇನ್ನೊಂದು ವಿಷಯ, ಈ ವಿಷದ ಪುಡಿ ಮುಗಿಯುವವರೆಗೂ ನೀನು ನಿನ್ನ ಅತ್ತೆಯೊಂದಿಗೆ ಜಗಳವಾಡಬಾರದು, ಹಾಗೆಯೇ ಅವಳಿಗೆ ಯಾವುದು ಇಷ್ಟವೋ ಅದನ್ನೇ ಮಾಡಬೇಕು, ಪಾಪ, ಇನ್ನೆಷ್ಟು ದಿನ ಬದುಕಿದ್ದಾಳು, ಎಂದರು.

ಮನೆಗೆ ಬಂದು ಯೋಗಿಗಳು ಹೇಳಿದ ಹಾಗೆ, ಅತ್ತೆಯ ಮೇಲೆ ಹುಸಿ ಪ್ರೀತಿಯನ್ನು ತೋರಿಸುತ್ತಾ, ಅತ್ತೆ ಹೇಳಿದಂತೆ, ಅವಳಿಗಿಷ್ಟವಾದಂಥ ಕೆಲಸ ಮಾಡ ತೊಡಗಿದಳು, ಬೆಳಗಿನ ಸಮಯದಲ್ಲಿ, ಯೋಗಿಗಳು ಕೊಟ್ಟ ಪುಡಿಯನ್ನು ಹಾಲಿಗೆ ಹಾಕಿ ಕೊಡುತ್ತಿದ್ದಳು. ಅತ್ತೆಗೆ ಇವಳ ಬದಲಾವಣೆ ಕಂಡು ಆಶ್ಚರ್ಯವಾದರೂ ಒಳಗೊಳಗೇ, ಖುಷಿಯಿಂದ ಇರುತ್ತಿದ್ದಳು. ಕ್ರಮೇಣ ಅವಳಿಗೂ ಇವಳ ಮೇಲೆ ಪ್ರೀತಿ ಬರತೊಡಗಿತು. ಎಲ್ಲೊ ತಾನೇ ಸರಿ ಇರಲ್ಲಿಲ್ಲ, ಇವಳೊಂದಿಗೆ ಎಷ್ಟು ಒರಟಾಗಿ ನೆಡೆದುಕೊಂಡೆ ಎಂದು ಕೊಂಡು, ಅವಳನ್ನು ತುಂಬಾ ಪ್ರೀತಿಸತೊಡಗಿದಳು.

ಆರು ತಿಂಗಳು ಕಳೆಯುವುದರಲ್ಲಿ ಇಬ್ಬರೂ ಒಬ್ಬರನ್ನೊಬ್ಬರು ಬಿಟ್ಟಿರದಷ್ಟು ಹತ್ತಿರವಾದರು. ಒಬ್ಬರ ಬಗ್ಗೆ ಒಬ್ಬರಿಗೆ, ಗೌರವ, ಆದರ ಉಂಟಾಯಿತು.

ಒಂದು ದಿನ ಸೊಸೆ ಯೋಗಿಗಳಿದ್ದಲ್ಲಿ ಹೋಗಿ, ಅವರ ಕಾಲಿಗೆ ಬಿದ್ದು, ಸ್ವಾಮಿ, ನನ್ನ ಅತ್ತೆ ನಿಜವಾಗಿಯೂ ದೇವರಂತವರು, ಅವರಿಗೆ ನಾನು ಇಷ್ಟು ದಿನ ವಿಷ ಹಾಕಿದ್ದೇನೆ, ಅವರು ಬಹುಕಾಲ ಬದುಕಬೇಕು, ಅವರು ಸಾಯಬಾರದು, ದಯವಿಟ್ಟು ಅವರು ಬದುಕುವಂತೆ, ಏನಾದರೂ ಔಷಧಿ ನೀಡಿ, ಎಂದು ಅತ್ತಳು.

ಯೋಗಿಗಳು ನಗುತ್ತಾ ಹೇಳಿದರು ಚಿಂತಿಸಬೇಡಾ, ನಾನು ಕೊಟ್ಟಿದ್ದು ಸಕ್ಕರೆ ಪುಡಿಯಷ್ಟೆ, ಅದು ವಿಷವಲ್ಲ. ನಿನ್ನ ಹೃದಯದಲ್ಲಿದ್ದ ವಿಷವನ್ನು ತೆಗೆದ ಔಷಧಿ ಅದು, ಎಂದರು. ಸೊಸೆ ತನ್ನನ್ನು ಕ್ಷಮಿಸಿ ಎಂದು ಯೋಗಿಗಳ ಪಾದಕ್ಕೆರಗಿ ಮನೆಗೆ ಹೊರಟಳು.

ಅಂದಿನಿಂದ ಅವರಿಬ್ಬರೂ ತಾಯಿ ಮಗಳಂತೆ ಬದುಕಿದರು.

ಬೇರೆಯವರ ತಪ್ಪುಗಳನ್ನೇ ಎಣಿಸುತ್ತಾ ಹೋದರೆ, ನಮ್ಮ ಮನಸ್ಸು ಇನ್ನಷ್ಟು ಕೆಡುತ್ತದೆ, ಬದಲಾಗಿ, ಅವರ ಒಳ್ಳೆಯ ಗುಣಗಳನ್ನು ನೋಡಿದರೆ, ಬದುಕು ಸುಂದರವಾಗುವುದರಲ್ಲಿ, ಸಂದೇಹವಿಲ್ಲ.





# ಉತ್ತಮ ಅಂಶಗಳನ್ನು ಮಸ್ತಕದಲ್ಲಿರಿಸಬೇಕಂತೆ....

**■ ನಮ್ಮ ತಾಪತ್ರಯಗಳು, ನೋವುಗಳು, ಬೇನೆ-ಬೇಸರಿಕೆ ನಿವಾರಿಸುವ ಅಸ್ತ್ರ ಪುಸ್ತಕ ಓದುವುದರಿಂದ ಸಿಗುತ್ತದೆ. ಓದು-ಬರೆಹ ಬದುಕಿನ ಮೆಟ್ಟಿಲುಗಳು. ಮೆಟ್ಟಿಲು ಜಾರದಂತೆ ಏರುವುದು ನಮ್ಮ ಕರ್ತವ್ಯ. ಮಗುವಿನ ಸುಪ್ತ ಪ್ರತಿಭೆ ಅರಳಲು ಪುಸ್ತಕಗಳ ಓದುವಿಕೆಯೊಂದಿಗೆ, ಶಿಕ್ಷಣ ಸಹಕಾರಿ. ಒಂದು ಮಾತಿದೆ ಮೃಷ್ಟಾನ್ನದ ನೆನಪು ಮೂರು ದಿನ, ಶ್ರೇಷ್ಠ ಗ್ರಂಥದ ನೆನಪು ಮಸಣದವರೆಗೆ ಸತ್ಯವಿದು.**

ಪುಸ್ತಕವ ಓದುತಲಿ ಜ್ಞಾನವನು ಗಳಿಸಯ್ಯಾ
ಮಸ್ತಕದಿ ಇರಿಸುತಲಿ ಬದುಕನ್ನು ನಡೆಸಯ್ಯಾ
ಓದು-ಬರೆಹ ಜೀವನದ ಮೆಟ್ಟಿಲುಗಳಯ್ಯಾ
ಹೆತ್ತವರ ಗುರು ಹಿರಿಯರ ಸದಾ ಗೌರವಿಸಯ್ಯಾ
ಈ ಜೀವ ಭಗವಂತನ ಭಿಕ್ಷೆ ತಿಳಿಯಯ್ಯಾ
ನಾಡು ನುಡಿ ರಾಷ್ಟ್ರಭಕ್ತಿಯದು ದೊಡ್ಡದಯ್ಯಾ
ಬದುಕಿನ ಮೌಲ್ಯಂಗಳ ಅಳವಡಿಸಿಕೊಂಡರೆ ಒಲಿವಳು ಶ್ರೀದುರ್ಗೆ

ಪುಸ್ತಕವನ್ನೋದಿ ಅದರಲ್ಲಿರುವ ಉತ್ತಮ ಅಂಶಗಳನ್ನು ಮಸ್ತಕದಲ್ಲಿರಿಸಬೇಕಂತೆ. ಆ ಸಾರವನ್ನು ಸಮಯ, ಸಂದರ್ಭಕ್ಕೆ ಅಳವಡಿಸಿಕೊಳ್ಳುವವರೇ ಜಾಣರು, ಬುದ್ಧಿವಂತರು. ಅಷ್ಟು ಪುಸ್ತಕ ಓದಿದೆ, ಇಷ್ಟು ಓದಿದೆ ಎಂದು ಹೇಳಿಕೊಳ್ಳವವರ ನಡುವೆ ನಾವಿದ್ದೇವೆ. ಎಷ್ಟು ಪ್ರಯೋಜನವಾಗಿದೆ ಅದು ಮುಖ್ಯವಲ್ಲವೇ? ನಮ್ಮ ತಾಪತ್ರಯಗಳು, ನೋವುಗಳು, ಬೇನೆ-ಬೇಸರಿಕೆ ನಿವಾರಿಸುವ ಅಸ್ತ್ರ ಪುಸ್ತಕ ಓದುವುದರಿಂದ ಸಿಗುತ್ತದೆ. ಓದು-ಬರೆಹ ಬದುಕಿನ ಮೆಟ್ಟಿಲುಗಳು. ಮೆಟ್ಟಿಲು ಜಾರದಂತೆ ಏರುವುದು ನಮ್ಮ ಕರ್ತವ್ಯ. ಮಗುವಿನ ಸುಪ್ತ ಪ್ರತಿಭೆ ಅರಳಲು ಪುಸ್ತಕಗಳ ಓದುವಿಕೆಯೊಂದಿಗೆ, ಶಿಕ್ಷಣ ಸಹಕಾರಿ. ಒಂದು ಮಾತಿದೆ ಮೃಷ್ಟಾನ್ನದ ನೆನಪು ಮೂರು ದಿನ, ಶ್ರೇಷ್ಠ ಗ್ರಂಥದ ನೆನಪು ಮಸಣದವರೆಗೆ ಸತ್ಯವಿದು. ಓದಿನೊಂದಿಗೆ ಭಗವತ್ ಚಿಂತನೆಯೂ ಬೇಕು. ಅದಕ್ಕಾಗಿ ಮಕ್ಕಳಿಗೆ ಪುರಾಣದ ಸಣ್ಣ ಸಣ್ಣಕಥೆಗಳ ಪುಸ್ತಕ, ಬಾಲಪ್ರಪಂಚದ ಅರಿವಿನ ಪುಸ್ತಕಗಳನ್ನು ನೀಡಿ ಓದಲು ಪ್ರೋತ್ಸಾಹಿಸಬೇಕು. ಭೂತದೊಂದಿಗೆ ವರ್ತಮಾನದ ಅರಿವಿನ ಕೃತಿಗಳೂ ಬೇಕು. ಪುಸ್ತಕಗಳು ಬದುಕನ್ನು ಬದಲಾಯಿಸುವ, ಉತ್ತಮ ಜೀವನ ಶೈಲಿಯತ್ತ ಕೊಂಡೊಯ್ಯುವ ಸಂಜೀವಿನಿ ಇದ್ದಂತೆ. ನೀತಿಯನ್ನು ಸಾರುವ, ಮಾನವೀಯ ಮೌಲ್ಯಗಳನ್ನು ಬಿತ್ತುವ ಅನೇಕ ಪುಸ್ತಕಗಳಿವೆ. ಓದಲು ಮನಸ್ಸಿರಬೇಕು, ಸ್ವತಃ ಆಸಕ್ತಿ ಬೇಕು. ಒತ್ತಾಯ ಸಲ್ಲದು. ಜೀವನಕ್ಕೆ ಉಪಯೋಗವಿಲ್ಲದ ಪುಸ್ತಕಗಳನ್ನು ಓದಿ ಸಮಯ, ಆಯುಷ್ಯ ಹಾಳುಮಾಡಿಕೊಳ್ಳಬಾರದು. ಹೊಸ ಹೊಸ ಚಿಂತನೆಗಳು ಹುಟ್ಟಿಕೊಳ್ಳುವುದೇ ಉತ್ತಮ ಗ್ರಂಥಗಳ ಓದಿನಿಂದ. ಸತ್ಯ-ಅಸತ್ಯಗಳ ಅರಿವು ನಮಗೆ ಪುಸ್ತಕಗಳಿಂದ, ಜೀವನಾನುಭವಗಳಿಂದ ಸಿಗುವುದು. ಓದೋಣ- ಬರೆಯೋಣ- ಕಲಿಯೋಣ- ಕಲಿಸೋಣ.

**- ರತ್ನಾ ಕೆ ಭಟ್,** ತಲಂಜೇರಿ

# ಆತ್ಮಪೂರ್ವಕವಾಗಿ ಮಾಡಿದ ಸೇವೆ ಚಿರಕಾಲ ಉಳಿಯಲಿದೆ

## ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅಭಿಮತ

• ಪ್ರಜೋದಯ ವರದಿ

**ಸಕಲೇಶಪುರ:** ಕರುಳು ಮತ್ತು ಕೊರಳಿನ ಮಾತುಗಳ ನಡುವೆ ವ್ಯತ್ಯಾಸ ತಿಳಿಯುವುದು ಅಗತ್ಯ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ಶಾಸಕ ಸೀಮೆಂಟ್ ಮಂಜು ಅವರ ಹುಟ್ಟುಹಬ್ಬದ ಹಿನ್ನಲೆಯಲ್ಲಿ ಮಂಗಳವಾರ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆತ್ಮಪೂರ್ವಕವಾಗಿ ಮಾಡಿದ ಸೇವೆ ಬದುಕಿನುದ್ದಕ್ಕೂ ನೆರವಾಗುತ್ತದೆ. ಸ್ವಾರ್ಥದಿಂದ ಮಾಡಿದ ಸೇವೆ ಕ್ಷಣಿಕ. ಬಡವರ ಸೇವೆ ಮಾಡುವುದರಿಂದ ದೇವರ ಕೃಪೆಗೆ ಪಾತ್ರರಾಗಬಹುದು. ಹುಟ್ಟಿದ ನಾಡು ಹಾಗೂ ಹೆತ್ತ ತಾಯಿ ಸ್ವರ್ಗಕ್ಕೆ ಸಮ; ಈ ಇಬ್ಬರಿಗೂ ಆತ್ಮಪೂರ್ವಕ ಸೇವೆ ಮಾಡಿದರೆ ಮತ್ತಾವ ದೇವಸ್ಥಾನಕ್ಕೂ ಹೋಗುವ ಅಗತ್ಯವಿಲ್ಲ. ಇಂತಹ ಸೇವೆಯನ್ನು ಶಾಸಕರು ಮಾಡುತ್ತಿದ್ದು, ಇವರ ಸಕ್ರಿಯತೆ ಮುಂದಿನ ದಿನಗಳಲ್ಲಿ ಉನ್ನತ ಸ್ಥಾನವನ್ನು ದೊರಕಿಸಿಕೊಡುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.




ಯಸಳೂರು ತೆಂಕಲಗೂಡು ಬೃಹನ್ಮಠದ ಶ್ರೀ ಚನ್ನಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಬದುಕು ಮಾದರಿಯಾಗಿರಬೇಕು. ಹೇಗಾದರೂ ಬದುಕುವುದಕ್ಕೆ ಅರ್ಥವಿಲ್ಲ. ಹೀಗೆ ಬದುಕಬೇಕೆಂದು ಬದುಕಿದಾಗ ಬದುಕಿಗೆ ಅರ್ಥ ಬರುತ್ತದೆ. ಸಾಧಕರು ನಮ್ಮ ಮಾದರಿಗಳಾಗಬೇಕು. ಆದರೆ, ಇಂದಿನ ಯುವಜನಾಂಗಕ್ಕೆ ಯಾರಾರು ಮಾದರಿಯಾಗುತ್ತಿದ್ದಾರೆ ಎಂಬುದನ್ನು ಗಮನಿಸಬೇಕು. ಅಧಿಕಾರ ಬಂದಾಗ ಅಹಂಕಾರ ಬಂದರೆ ಒಳ್ಳೆಯದಲ್ಲ. ದೊಡ್ಡವರಾದಂತೆ ಸರಳತೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಕಿರಕೊಡ್ಲಿ ಮಠದ ಶ್ರೀ ಸದಾಶಿವಸ್ವಾಮೀಜಿ ಆಶೀರ್ವಚನ ನೀಡಿ ಮಾತನಾಡಿ, ಹುಟ್ಟುಹಬ್ಬಗಳ ಆಚರಣೆ ಅಬ್ಬರದ ಬದಲಾಗಿ ಸಾರ್ವಜನಿಕರಿಗೆ ಸಹಾಯವಾಗುವಂತಿರಬೇಕು. ಇಂದು ನಡೆಯುತ್ತಿರುವ ಶಾಸಕರ ಹುಟ್ಟುಹಬ್ಬ ಮುಂದಿನ ದಿನಗಳಲ್ಲಿ ಎಲ್ಲರಿಗೂ ಮಾದರಿಯಾಗಲಿ; ಹೆಚ್ಚೆಚ್ಚು ಒಳ್ಳೆಯ ಕಾರ್ಯಗಳು ನಡೆಯಲಿ ಎಂದು ಹಾರೈಸಿದರು.

ಕಲ್ಮಠದ ಶ್ರೀ ಮಹಾಂತಸ್ವಾಮೀಜಿ ಅವರು ಮಾತನಾಡಿ, ಇಂದು ವೈಟ್ ಕಾಲರ್ ರಾಜಕಾರಣ ಕಣ್ಮರೆಯಾಗಿದ್ದು, ಜನಪ್ರತಿನಿಧಿಗಳ ನಡೆನುಡಿಯನ್ನು ಜನರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಉತ್ತಮ ಕಾರ್ಯಗಳನ್ನು ಮಾಡಿದವರು ಮಾತ್ರ ಹೆಚ್ಚು ದಿನ ಸಾರ್ವಜನಿಕ ಜೀವನದಲ್ಲಿ ಇರಲು ಸಾಧ್ಯ. ಆದ್ದರಿಂದ ಜನರಿಗೆ ಸಹಾಯಕವಾಗುವಂತಹ ಆರೋಗ್ಯ ಶಿಬಿರದಂತಹ ಕಾರ್ಯಗಳು ಜನರ ಮೆಚ್ಚುಗೆ ಗಳಿಸಲು ಸಹಕಾರಿಯಾಗುತ್ತವೆ ಎಂದು ಹೇಳಿದರು.

ಕಾರ್ಜುವಳ್ಳಿ ಹಿರೇಮಠದ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜನನ ಮತ್ತು ಮರಣ ಮಾನವನ ಜೀವನದಲ್ಲಿ ಒಂದು ಪುಸ್ತಕವಿದ್ದಂತೆ. ಈ ಪುಸ್ತಕವನ್ನು ನಾವು ಹೇಗೆ ಬರೆಯುತ್ತೇವೋ ಅದು ನಮ್ಮ ಕೈಯಲ್ಲಿದೆ. ನಮ್ಮ ವರ್ತನೆಗಳಿಂದಲೇ ಸ್ವರ್ಗ- ನರಕಗಳು ನಿರ್ಧಾರವಾಗುತ್ತವೆ. ಆದ್ದರಿಂದ ನಮ್ಮ ವರ್ತನೆಗಳ ಬಗ್ಗೆ ಹೆಚ್ಚು ಜಾಗ್ರತೆಯಾಗಿರಬೇಕು. ಹೆಚ್ಚೆಚ್ಚು ಕ್ರಿಯಾಶೀಲರಾಗಿದ್ದಾಗ ಸಾಧನೆ ಮಾಡಬಹುದು. ಇದಕ್ಕೆ ಶಾಸಕ ಸಿಮೆಂಟ್ ಮಂಜು ಉದಾಹರಣೆ. ಆದ್ದರಿಂದ ಸೋಮಾರಿತನವನ್ನು ದೂರ ಮಾಡಬೇಕು ಎಂದು ಸಲಹೆ ನೀಡಿದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಜನರು ನನಗೆ ಕೊಟ್ಟ ಅಧಿಕಾರವನ್ನು ಶಕ್ತಿಮೀರಿ ಒಳ್ಳೆಯ ಕೆಲಸಗಳಿಗೆ ಬಳಸಿಕೊಳ್ಳುತ್ತೇನೆ. ನನ್ನಿಂದ ಜನರಿಗೆ ಯಾವುದೇ ದ್ರೋಹವಾಗುವುದಿಲ್ಲ. ನನ್ನ ಜೀವನದ ಕಟ್ಟಕಡೆಯವರೆಗೂ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ವೇದಿಕೆಯಲ್ಲಿ ಸಂಕಲಾಪುರ ಮಠದ ಕಿರಿಯ ಶ್ರೀ ಶಾಂತವೀರ ಮಲ್ಲಿಕಾರ್ಜುನ ಸ್ವಾಮೀಜಿ, ಹಾಸನ ತಣ್ಣೀರುಹಳ್ಳ ಮಠದ ಶ್ರೀ ವಿಜಯ ಕುಮಾರ ಸ್ವಾಮೀಜಿ, ಮುಖಂಡರಾದ ಪ್ರತಾಪ, ವಳಲಹಳ್ಳಿ ಅಶ್ವಥ್, ನೇತ್ರಾ ಮಂಜುನಾಥ್, ಹಾಸನ ಕಿಮ್ಸ್ ಆಸ್ಪತ್ರೆಯ ನಿರ್ದೇಶಕ ಡಾ. ರಾಜಣ್ಣ ಮುಂತಾದವರು ಉಪಸ್ಥಿತರಿದ್ದರು.

## ವಿಭಾಗ ಮಟ್ಟದ ಸ್ಪರ್ಧೆ: ರಾಜ್ಯಮಟ್ಟಕ್ಕೆ ಆಯ್ಕೆ



**ಬೇಲೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮೈಸೂರಿನ ಕಲಾ ಮಂದಿರದಲ್ಲಿ ಸೋಮವಾರ ನಡೆದ ಯುವ ಕಲಾ ಪ್ರತಿಭೋತ್ಸವ 2025-26 ನೇ ಸಾಲಿನ ವಿಭಾಗ ಮಟ್ಟದ ಸ್ಪರ್ಧೆಯಲ್ಲಿ ಬೇಲೂರಿನ ಬಿ.ಎಸ್.ಸಂಜೀವ ಅವರು ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದು, ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಅವರು ಅಭಿನಂದಿಸಿ ಮುಂದಿನ ಸ್ಪರ್ಧೆಯಲ್ಲೂ ವಿಜೇತರಾಗುವಂತೆ ಶುಭ ಹಾರೈಸಿದರು.**

## ಡಿ.30 ರಂದು ತಾ.ಪಂ. ಸಾಮಾನ್ಯ ಸಭೆ

ಹಾಸನ: ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಡಿ.30 ರಂದು ಬೆಳಿಗ್ಗೆ 10.30 ಗಂಟೆಗೆ ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಎನ್.ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಅವರು ತಿಳಿಸಿದ್ದಾರೆ.

# ಅತಿಯಾದ ರಸಗೊಬ್ಬರ ಬಳಕೆಯಿಂದ ಭೂಮಿ ಬರಡು

• ಪ್ರಜೋದಯ ವರದಿ

**ಅರಕಲಗೂಡು:** ರೈತರು ತಮ್ಮ ಕೃಷಿ ಜಮೀನಿನ ಫಲವತ್ತತೆ ಕಾಪಾಡಿಕೊಳ್ಳಲು ಗಮನ ಹರಿಸಬೇಕು ಎಂದು ಹಾಸನ ಆಕಾಶವಾಣಿಯ ನಿವೃತ್ತ ಅಧಿಕಾರಿ ಡಾ. ವಿಜಯ್ ಅಂಗಡಿ ಅವರು ತಿಳಿಸಿದರು.



ಪಟ್ಟಣದ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ಮಂಗಳವಾರ ನಡೆದ ರೈತ ದಿನಾಚರಣೆಯಲ್ಲಿ ಕೃಷಿ ಬಗ್ಗೆ ಮಾಹಿತಿ ನೀಡಿದ ಅವರು, ಅತಿಯಾದ ರಸಗೊಬ್ಬರದ ಬಳಕೆ ಭೂಮಿಯನ್ನು ಬರಡು ಮಾಡುತ್ತಿದ್ದು ಸಗಣಿ ಹಾಗೂ ಎರೆಹುಳುವಿನ ಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಬೇಕು, ಅಕ್ಕಿಗಿಂತ ರಾಗಿಯಲ್ಲಿ ಹೆಚ್ಚಿನ ಪೋಷಕಾಂಶಗಳು ಇದ್ದು ಆಹಾರದಲ್ಲಿ ರಾಗಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುವುದರಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಜಿಲ್ಲಾ ರೈತ ಸಂಘದ ಮುಖಂಡ ಕಣಗಾಲು ಮೂರ್ತಿ ಮಾತನಾಡಿ, ಎಲ್ಲ ರಾಜಕೀಯ ಪಕ್ಷಗಳುಸಹ ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾಗಿವೆ. ಹವಾಮಾನ ವೈಪರೀತ್ಯ, ಬೆಲೆ ಕುಸಿತ ಸೇರಿದಂತೆ ವಿವಿಧ ಸಂಕಷ್ಟಗಳ ಪರಿಣಾಮ ರೈತರು ತಮ್ಮ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗದೆ ಪರಿತಪಿಸುತ್ತಿದ್ದಾರೆ. ರೈತರು ಸಂಘಟಿತರಾಗಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆಸಬೇಕಿದೆ ಎಂದರು.

ಜಿಲ್ಲಾ ರೈತ ಸಂಘದ ಅಧ್ಯಕ್ಷೀಯ ಮಂಡಳಿ ಸದಸ್ಯ ಜಗದೀಶ್, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ಕೆ.ಸಿ.ಸೌಮ್ಯ, ತಾಲ್ಲೂಕು ರೈತ ಸಂಘದ ಕಾರ್ಯಾಧ್ಯಕ್ಷ ಎಚ್.ಎಚ್. ಭುವನೇಶ್ ಮಾತನಾಡಿದರು. ರೈತ ಮುಖಂಡ ಗ್ಯಾರಂಟಿ ರಾಮಣ್ಣ ರೈತ ಗೀತೆ ಗಾಯನ ನಡೆಸಿದರು. ಉತ್ತಮ ಕೃಷಿ ನಡೆಸುತ್ತಿರುವ 13 ಮಂದಿ ರೈತರನ್ನು ಸನ್ಮಾನಿಸಲಾಯಿತು.

ತಾಲ್ಲೂಕು ಕೃಷಿಕ ಸಮಾಜದ ಉಪಾಧ್ಯಕ್ಷ ಬೇಲೂರೇಗೌಡ, ತಾಲ್ಲೂಕು ರೈತ ಸಂಘದ ಅಧ್ಯಕ್ಷ ಹೊಂಬೇಗೌಡ, ಉಪಾಧ್ಯಕ್ಷ ಮಂಜೇಗೌಡ, ಮುಖಂಡರಾದ ಎಚ್.ಆರ್.ದಿನೇಶ್, ನರಸೇಗೌಡ, ಚೌಡೇಗೌಡ, ಕಮಲಮ್ಮ, ಲಕ್ಷ್ಮಮ್ಮ, ಸಹಾಯಕ ಕೃಷಿ ನಿರ್ದೇಶಕಿ ಕೆ.ಜಿ.ಕವಿತಾ, ತೋಟಗಾರಿಕೆ ಅಧಿಕಾರಿ ಡಿ.ರಾಜೇಶ್, ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಸೀತಾರಾಮ್ ಭಟ್ ಉಪಸ್ಥಿತರಿದ್ದರು.

# ಬಾಂಗ್ಲಾದೇಶದಲ್ಲಿ ಹಿಂದೂ ಯುವಕನ ಹತ್ಯೆ: ಶ್ರದ್ಧಾಂಜಲಿ

• ಪ್ರಜೋದಯ ವರದಿ

**ಸಕಲೇಶಪುರ:** ಬಾಂಗ್ಲಾದೇಶದಲ್ಲಿ ಹಿಂದೂ ಯುವಕ ದೀಪು ಚಂದ್ರ ದಾಸ್ ಹತ್ಯೆಯ ಹಿನ್ನೆಲೆಯಲ್ಲಿ ಹಿಂದೂ ಹಿತರಕ್ಷಣಾ ವೇದಿಕೆಯ ವತಿಯಿಂದ ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿ ಸೋಮವಾರ ಸಂಜೆ ಶ್ರದ್ಧಾಂಜಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.



ವೇದಿಕೆಯ ತಾಲ್ಲೂಕು ಅಧ್ಯಕ್ಷ ಮಂಜುನಾಥ ಕಬ್ಬಿನಗದ್ದೆ ಮಾತನಾಡಿ, ಸಕಲೇಶಪುರ ಹಾಗೂ ಸುತ್ತಮುತ್ತಲಿನ ಕಾಫಿ ತೋಟಗಳಲ್ಲಿ ಅಸ್ಸಾಮಿಗರು ಎಂಬ ಹೆಸರಿನಲ್ಲಿ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರು ಬಹುತೇಕ ಮೂಲತಃ ಬಾಂಗ್ಲಾದೇಶದವರಾಗಿರಬಹುದೆಂಬ ಅನುಮಾನಗಳಿವೆ. ಈ ಕುರಿತು ತಾಲ್ಲೂಕು ಆಡಳಿತ ಗಂಭೀರ ತನಿಖೆ ನಡೆಸಬೇಕು. ಅಲ್ಲದೆ ಕೆಲವರು ನಗರ ಪ್ರದೇಶಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದು, ಮಾರುಕಟ್ಟೆ ಹಾಗೂ ಸಂತೆಯಲ್ಲಿ ಇವರಿಂದ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ ಎಂಬ ದೂರುಗಳೂ ಇವೆ. ಕೃಷಿ ಮಾರುಕಟ್ಟೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿರುವ ಬದಲು ಕಾನೂನುಬದ್ಧವಾಗಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಕಲೇಶಪುರ ಪಟ್ಟಣದ ವಿವಿಧ ವಾರ್ಡ್‌ಗಳಾದ ರಾಘವೇಂದ್ರ ನಗರ, ಬಾಳೆಗದ್ದೆ, ಸಿಪಿಸಿ ಬೌಂಡರಿ, ವಾರ್ಡ್ ಸಂಖ್ಯೆ 7, 8, 9 ಹಾಗೂ ಆಚಂಗಿ ಕುಡುಗರಹಳ್ಳಿ ಭಾಗಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ಕಾರ್ಮಿಕರ ಕುರಿತು ಸಮಗ್ರ ಪರಿಶೀಲನೆ ನಡೆಸಬೇಕು ಎಂದು ಅವರು ಒತ್ತಾಯಿಸಿದರಲ್ಲದೆ, ಈ ವಿಷಯದಲ್ಲಿ 10 ದಿನಗಳೊಳಗೆ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನು ತಡೆದು ಪ್ರತಿಭಟನೆ ನಡೆಸಿ ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿಗಳ ಗಮನ ಸೆಳೆಯಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಕಾರ್ಯಕ್ರಮದ ಅಂಗವಾಗಿ ಮೇಣದ ಬತ್ತಿ ಹಚ್ಚಿ ಮೌನಾಚರಣೆ ನಡೆಸಿ ದೀಪು ಚಂದ್ರ ದಾಸ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಪೂಜಾರಿ, ವೀರೇಶ್, ಶ್ರೀಜಿತ್, ದುಷ್ಯಂತ್ ಗೌಡ, ಸಿದ್ದಾಪುರ ಶೇಖರ್, ಧರ್ಮರಾಜ್, ಆಟೋ ಲೋಕಿ, ರವಿ ಹೆಬ್ಬಸಾಲೆ, ಪ್ರಶಾಂತ್, ಆಟೋ ರವಿ ಸೇರಿದಂತೆ ಹಲವು ಕಾರ್ಯಕರ್ತರು ಉಪಸ್ಥಿತರಿದ್ದರು.

## ಪಿ.ಎಚ್.ಡಿ. ಪದವಿ



**ಹಾಸನ:** ಹೊಳೆನರಸೀಪುರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಕೆ. ಗುರುರಾಜು ಅವರು ಅರ್ಥಶಾಸ್ತ್ರ ವಿಷಯದಲ್ಲಿ ಮಂಡಿಸಿದ Environmental Impact on Cardamom Growers in Hassan District ಎಂಬ ಮಹಾಪ್ರಬಂಧಕ್ಕೆ ದ್ರಾವಿಡಿಯನ್ ವಿಶ್ವವಿದ್ಯಾನಿಲಯ ಪಿ.ಎಚ್.ಡಿ. ಪದವಿ ನೀಡಿ ಗೌರವಿಸಿದೆ ಎಂದು ವಿಶ್ವವಿದ್ಯಾನಿಲಯ ಪ್ರಕಟಣೆ ತಿಳಿಸಿದೆ.

ಕೆ. ಗುರುರಾಜು ಅವರು ಶಿರಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಆರ್.ವೈ. ಖಾನ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಮಹಾ ಪ್ರಬಂಧವನ್ನು ಮಂಡಿಸಿದ್ದರು.

# ಕೃಷಿಯೊಂದಿಗೆ ಹೈನುಗಾರಿಕೆ ಮಾಡಿದರೆ ರೈತರಿಗೆ ಅಧಿಕ ಲಾಭ

• ಪ್ರಜೋದಯ ವರದಿ

**ಆಲೂರು:** ರೈತರು ಕೃಷಿಯೊಂದಿಗೆ ಹೈನುಗಾರಿಕೆಯಿಂದ ಅಧಿಕ ಲಾಭ ಪಡೆಯಲು ಸಾಕಷ್ಟು ಅವಕಾಶ ಕಲ್ಪಿಸಲಾಗುತ್ತಿದೆ ಎಂದು ತಹಸೀಲ್ದಾರ್ ಮಲ್ಲಿಕಾರ್ಜುನ ತಿಳಿಸಿದರು.

ಪಟ್ಟಣದ ಕೃಷಿ ಇಲಾಖೆ ಆವರಣದಲ್ಲಿ 2025-26 ನೇ ಸಾಲಿನಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ ಹಾಗೂ ಮೀನುಗಾರಿಕೆ ಇಲಾಖೆಗಳು, ಕೃಷಿಕ ಸಮಾಜ ಆಲೂರು ಹಾಗೂ ರೈತ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ, ಉಪ ಪ್ರಧಾನಿ ಚೌದರಿ ಚರಣಸಿಂಗ್ ಅವರ ಜನ್ಮ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ರಾಷ್ಟ್ರೀಯ ರೈತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಒಂದು ವರ್ಷ ರೈತರು ಕೈಕಟ್ಟಿ ಕುಳಿತರೆ ಜನಸಾಮಾನ್ಯರು ಆಹಾರ ಕೊರತೆಯಿಂದ ನರಳಬೇಕಾಗುತ್ತದೆ. ರೈತರ ಮಕ್ಕಳು ಸಹ ವಿದ್ಯಾವಂತರಾಗಬೇಕು. ಆದರೆ ಕೃಷಿ ಕಸುಬನ್ನು ಬೆಂಬಲಿಸಿ ತಮ್ಮ ಜೀವನದೊಂದಿಗೆ ಇತರರ ಜೀವನದ ದಾರಿ ದೀಪವಾಗಬೇಕು ಎಂದರು.

ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಹೆಚ್.ಎನ್ ಧರ್ಮಲಿಂಗಂ ಅವರು ಮಾತನಾಡಿ, ಸುಮಾರು ಐದು ದಶಕಗಳಿಂದ ಕೃಷಿಯಲ್ಲಿ ರಾಸಾಯನಿಕ ಬಳಸುತ್ತಿರುವುದರಿಂದ ಮಣ್ಣು ಕಲುಷಿತವಾಗಿದೆ. ಈಗಲಾದರೂ ರೈತರು ಸಾವಯವ ಕೃಷಿಯತ್ತ ಆಕರ್ಷಿತರಾಗದಿದ್ದರೆ ಮುಂದಿನ ದಿನಗಳಲ್ಲಿ ಭಾರಿ ಕಷ್ಟ -ನಷ್ಟವನ್ನು ಅನುಭವಿಸಬೇಕಾಗುತ್ತದೆ. ಅಲ್ಲದೆ ರೋಗ ರುಜಿನದಿಂದ ಜೀವನ ಸಾಗಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.



ಪಶು ಮಹಾವಿದ್ಯಾಯದ ಸಹಾಯಕ ಪ್ರಾಧ್ಯಾಪಕ ಡಾ. ಹೇಮಂತ್ ಗೌಡ ಮಾತನಾಡಿ, ರೈತರು ಹೈನುಗಾರಿಕೆಯಲ್ಲಿ ಅಧಿಕ ಲಾಭಗಳಿಸಲು ಮತ್ತು ರಾಸುಗಳಲ್ಲಿ ಹಾಲಿನ ಇಳುವರಿ ಹೆಚ್ಚಿಸಲು ಅನುಸರಿಸಬೇಕಾದ ಆಹಾರ ಪದ್ದತಿಗಳು, ರಾಸುಗಳಲ್ಲಿ ಕೆಚ್ಚಲು ಬಾವು ರೋಗದ ಮುಂಜಾಗ್ರತಾ ಕ್ರಮಗಳ ಕುರಿತು ಮಾಹಿತಿ ನೀಡಿದರು.

2025-26 ನೇ ಸಾಲಿನಲ್ಲಿ ಕೃಷಿ ಇಲಾಖೆಯ ಆತ್ಮ ಯೋಜನೆಯಡಿ ಕೃಷಿಯಲ್ಲಿ ಸಾಧನೆ ಮಾಡಿದ ರೈತರುಗಳಾದ ಬಿ.ಆರ್.ಕೃಷ್ಣೇಗೌಡ ರವರಿಗೆ ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಶಸ್ತಿ ವಿಜೇತ 25 ಸಾವಿರ ರೂ.ಗಳೊಂದಿಗೆ ಸ್ಮರಣಪತ್ರ ಮತ್ತು ತಾಲ್ಲೂಕು ಮಟ್ಟದ ಶ್ರೇಷ್ಠ ಪ್ರಶಸ್ತಿ ವಿಜೇತರಾದ ಎಸ್.ಆರ್.ಪಾಲಾಕ್ಷ, ಕೆ.ಪಿ.ಶಿವಲಿಂಗಪ್ಪ, ದೊಡ್ಡಯ್ಯ, ಬಿ.ಇ.ಚಂದ್ರಶೇಖರ್, ಕೆ.ಇ.ನಾಗೇಶ್ ರವರಿಗೆ 10ಸಾವಿರ ರೂ.ಗಳೊಂದಿಗೆ ಸ್ಮರಣಿಕೆ ಪತ್ರ ನೀಡಿ ಸನ್ಮಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಸುಬ್ರಮಣ್ಯ ಶರ್ಮಾ, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ರಮೇಶ್ ಕುಮಾರ್, ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಕೇಶವ್, ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಶಾಂತೇಗೌಡ, ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಸಂಜೀವ್, ಪಶುಪಾಲನಾ ಇಲಾಖೆ ವೈದ್ಯಾಧಿಕಾರಿ ಗಂಗಾಧರ್ ನಾಯಕ, ಕೆ.ಹೊಸಕೋಟೆ ಬಳಗದ ಮುಖಂಡರಾದ ಜಯಣ್ಣ ಹೈದೂರು, ತಾಲ್ಲೂಕು ಕೃಷಿ ಸಮಾಜದ ನಿರ್ದೇಶಕರುಗಳು, ಪದಾಧಿಕಾರಿಗಳು, ಸದಸ್ಯರುಗಳು, ಕೃಷಿ ಅಧಿಕಾರಿಗಳಾದ ಲಕ್ಷ್ಮೀ ಹೆಚ್.ಟಿ., ಸಂಗೀತಾ, ಕೆ.ಆರ್. ಮಾಂತೇಶ್ ಸೊರಟೂರು, ಗ್ರಾ.ಪಂ. ಕೃಷಿ ಸಖಿಯರು ಹಾಜರಿದ್ದರು.

## ಇಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ

**ಹಾಸನ:** ರಾಷ್ಟ್ರೀಯ ಗ್ರಾಹಕರ ದಿನಾಚರಣೆಯನ್ನು ಡಿ.24 ರಂದು ಮಧ್ಯಾಹ್ನ 3.30 ಗಂಟೆಗೆ ಎ.ವಿ ಕಾಂತಮ್ಮ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರದ ಆಯೋಗದ ಅಧ್ಯಕ್ಷರಾದ ಸಿ.ಎಂ ಚಂಚಲ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ. ಆರ್ ಪೂರ್ಣಿಮ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಅವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಡಾ.ಕಸ್ತೂರಿ ರಂಗನ್ ವರದಿ ತಿರಸ್ಕಾರ: ಆತಂಕ ದೂರ

• ಪ್ರಜೋದಯ ವರದಿ

**ಹಾಸನ:** ಮಲೆನಾಡು ಭಾಗದ ಜನರಲ್ಲಿ ಭಾರಿ ಆತಂಕ ಉಂಟು ಮಾಡಿದ್ದ ಡಾ.ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸಿರುವ ರಾಜ್ಯ ಸರ್ಕಾರದ ಕ್ರಮ ಸ್ವಾಗತಾರ್ಹ ಎಂದು ಜಿಲ್ಲಾ ಕಾಂಗ್ರೆಸ್ ವಕ್ತಾರರು ಹಾಗೂ ಮಾಜಿ ಜಿ.ಪಂ ಸ್ಥಾಯಿ ಸಮಿತಿ ಅಧ್ಯಕ್ಷ ಡಿ.ಸಿ ಸಣ್ಣಸ್ವಾಮಿ ಸರ್ಕಾರಕ್ಕೆ ಅಭಿನಂದನೆ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸಕಲೇಶಪುರ ಮಲೆನಾಡು ಭಾಗದ ರೈತರು, ಕಾಫಿ ಬೆಳೆಗಾರರು, ಹೋಮ್ ಸ್ಟೇ, ರೇಸಾರ್ಟ್ ಹಾಗೂ ವಸತಿ ಗ್ರಾಮಗಳಲ್ಲಿ ಹತ್ತಾರು ವರ್ಷಗಳಿಂದ ಸ್ವಾದೀನದಲ್ಲಿದ್ದು, ಜೀವನಕ್ಕಾಗಿ ಕಾಫಿ ಏಲಕ್ಕಿ, ಮೆಣಸು, ಶುಂಠಿ ಹಾಗೂ ಇನ್ನಿತರೆ ಬೆಳೆಗಳನ್ನು ಬೆಳೆದುಕೊಂಡು ಬದುಕು ಸಾಗಿಸುತ್ತಿದ್ದರು, ಆದರೆ ಕಸ್ತೂರಿ ರಂಗನ್ ವರದಿಯಿಂದ ಈ ಭಾಗದ ಜನರಲ್ಲಿ ಭಾರಿ ಆತಂಕ ಉಂಟು ಮಾಡಿತ್ತು.



ಯಾವುದೇ ರೀತಿಯ ಗಣಿಗಾರಿಕೆ, ಕೈಗಾರಿಕೆ, ಕಟ್ಟಡ ನಿರ್ಮಾಣ, ಸಿಮೆಂಟು, ಕಲ್ಲು, ರಾಸಾಯನಿಕ ಬಳಸಲು, ಜನವಸತಿ ನಿರ್ಮಿಸಲು ಅವಕಾಶವಿಲ್ಲ ಎಂಬ ಕಸ್ತೂರಿ ರಂಗನ್ ವರದಿ ಆತಂಕ ಸೃಷ್ಟಿಸಿತ್ತು. ಅದರೆ ಇದೀಗ ಡಾ. ಕಸ್ತೂರಿ ರಂಗನ್ ವರದಿಯನ್ನು ರಾಜ್ಯ ಸರಕಾರ ತಿರಸ್ಕರಿಸಿರುವುದು ರೈತರು ಸೇರಿದಂತೆ ಪ್ರವಾಸೋದ್ಯಮಕ್ಕೂ ಸಹ ಹೆಚ್ಚು ಅನುಕೂಲವಾಗಲಿದೆ. ರಾಜ್ಯ ಸರ್ಕಾರದ ಈ ಕ್ರಮ ಸ್ವಾಗತಾರ್ಹವಾದುದು ಎಂದು ತಿಳಿಸಿದ್ದಾರೆ.

ಈ ಹಿಂದೆ ಕಸ್ತೂರಿ ರಂಗನ್ ವರದಿಯ ಬಗ್ಗೆ ಭಾರಿ ಪರ,ವಿರೋಧ ಚರ್ಚೆಗಳಾಗಿದ್ದವು, ಕಸ್ತೂರಿ ರಂಗನ್ ವರದಿ ಜಾರಿಗೊಂಡರೆ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಹೆಚ್ಚಿನ ನಿರ್ಬಂಧಗಳನ್ನು ಜಾರಿಗೊಳಿಸಿದರೆ ಅದರಿಂದ ಗ್ರಾಮದ ಜನರು ಗಂಭೀರ ಸಮಸ್ಯೆಗಳನ್ನು ಅನುಭವಿಸಬೇಕಾಗಿತ್ತು, ಪಶ್ಚಿಮ ಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವ ಸಂಬಂಧ ಕೇಂದ್ರ ಸರ್ಕಾರ ಹೊರಡಿಸಿರುವ ಅಧಿಸೂಚನೆಯನ್ನು ರಾಜ್ಯ ಸರಕಾರ ತಿರಸ್ಕರಿಸಿರುವುದು, ಪರಿಸರ ಸೂಕ್ಷ್ಮ ವಲಯ ಹಾಗೂ ಸಂರಕ್ಷಿತ ಅರಣ್ಯ ಪ್ರದೇಶ ಹೊರತುಪಡಿಸಿ ಬೇರೆ ಪ್ರದೇಶದಲ್ಲಿ ಕೃಷಿ, ಮತ್ತಿತರ ಚಟುವಟಿಕೆ ಮುಂದುವರಿಸಲು ಯಾವುದೇ ತೊಂದರೆ ಇಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಬೆಳಗಾವಿ ಅಧಿವೇಶನದಲ್ಲಿ ತಿಳಿಸಿರುವುದು ನಿಟ್ಟುಸಿರು ಬಿಡುವಂತೆ ಮಾಡಿದೆ ಎಂದು ತಿಳಿಸಿದ್ದಾರೆ.

# ಡಿ.26 ರಂದು ಪಿಂಚಣಿ ಅದಾಲತ್

**ಹಾಸನ:** ಮೈಸೂರು ವಿಭಾಗದ ಜಿಲ್ಲೆಗಳ ಪಿಂಚಣಿದಾರರ ಹಾಗೂ ಜಿ.ಪಿ.ಎಫ್ ಚಂದಾದಾರರ ಕುಂದುಕೊರತೆ ಹಾಗೂ ಅಹವಾಲುಗಳನ್ನು ನಿವಾರಿಸಿಕೊಳ್ಳಲು ಪಿಂಚಣಿ ಅದಾಲತ್ ಡಿ.26 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ವಿ.ಸಿ. ಸಭಾಂಗಣದಲ್ಲಿ ಪಿಂಚಣಿ ಆದಾಲತ್ ಕಾರ್ಯಕ್ರಮ ಆಯೋಜಿಸಲಾಗಿರುತ್ತದೆ.

ಈ ಸಂಬಂದ ಮಹಾಲೇಖಪಾಲರ ಕಛೇರಿಯಿಂದ ಡೆಪ್ಯೂಟಿ ಆಕೌಂಟೆಂಟ್ ಜನರಲ್, ಹಿರಿಯ ಲೆಕ್ಕಾಧಿಕಾರಿಗಳು, ಖಜಾನೆ ಇಲಾಖೆ ಯಿಂದ ಅಪರ ನಿರ್ದೇಶಕರು, ಪಿಂಚಣಿ ಪಾವತಿ ಮತ್ತು SBI CPPC, Canara Bank CPPC, Union Bank of India CPPC, Bank of Baroda CPPC Agency ಬ್ಯಾಂಕುಗಳ ಸಹಾಯಕ ಮುಖ್ಯ ವ್ಯವಸ್ಥಾಪಕರು /ಪ್ರತಿನಿಧಿಗಳು ಜಿಲ್ಲಾ ಬ್ಯಾಂಕುಗಳು ವ್ಯವಸ್ಥಾಪಕರು ಹಾಗೂ ವಿಭಾಗದ ಖಜಾನೆ ಇಲಾಖೆ ಜಂಟಿ ನಿರ್ದೇಶಕರು/ ಜಿಲ್ಲೆಗಳ ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು/ ಉಪ ಖಜಾನಾಧಿಕಾರಿಗಳ ಸಮನ್ವಯದೊಂದಿಗೆ ಪಿಂಚಣಿ ಆದಾಲತ್ ಕಾರ್ಯಕ್ರಮ ಇರುತ್ತದೆ.

ಹಾಸನ ಜಿಲ್ಲೆಯ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್‌ನ ಎಲ್ಲಾ ಶಾಖೆಯ ವ್ಯವಸ್ಥಾಪಕರು ಹಾಗೂ ಪಿಂಚಣಿ ವಿಭಾಗದ ವಿಷಯ ನಿರ್ವಾಹಕರು ಕಡ್ಡಾಯವಾಗಿ ಹಾಜರಿದ್ದು ಪಿಂಚಣಿದಾರರ ಕುಂದು ಕೊರತೆ ಹಾಗೂ ಅಹವಾಲುಗಳಿಗೆ ಸೂಕ್ತ ಪರಿಹಾರ ನೀಡಲು ಸಹಕರಿಸಬೇಕೆಂದು ಜಿಲ್ಲಾ ಖಜಾನೆ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳಿಂದ ಆಹಾರಮೇಳ ಆಯೋಜನೆ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ಪ್ರಥಮ ಹಾಗೂ ದ್ವಿತೀಯ ಪಿಯು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಆಹಾರ ಮೇಳ ಆಯೋಜಿಸಿದ್ದರು.

ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಎಚ್.ಎಸ್.ಮಂಜುಶೆಟ್ಟಿಗೌಡ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ವ್ಯಾಪಾರ ಕೌಶಲ್ಯ ಕಲಿತು ಮುಂದಿನ ದಿನಗಳಲ್ಲಿ ಸ್ವ ಉದ್ಯೋಗ ಕೈಗೊಳ್ಳಲು ಇಂತಹ ಕಾರ್ಯಕ್ರಮಗಳು ನೆರವಾಗಲಿದೆ ಎಂದರು.

ಹನ್ನೆರಡು ತಂಡಗಳು ಚರುಮುರಿ, ಪಾನಿಪೂರಿ, ಗೋಬಿ ಮಂಚೂರಿ, ಚಿಕನ್ ಕಬಾಬ್, ಚಿಕನ್ ಬಿರಿಯಾನಿ, ಹಣ್ಣುಗಳ ಜ್ಯೂಸ್, ಸಿಹಿ ಖಾದ್ಯಗಳನ್ನು ತಯಾರಿಸಿ ಮಾರಾಟ ನಡೆಸಿದರು. ಎಲ್ಲ ತಂಡಗಳು ತಾವು ಹೂಡಿದ ಬಂಡವಾಳಕ್ಕಿಂತ ಹೆಚ್ಚಿನ ಲಾಭಗಳಿಕೆ ಮಾಡಿದರು.



ಕೆನರಾ ಬ್ಯಾಂಕ್‌ನಿಂದ ಕೊಡುಗೆಯಾಗಿ ನೀಡಿದ್ದ ಪಠ್ಯಪುಸ್ತಕಗಳನ್ನು ವಿತರಿಸಲಾಯಿತು. ಸಿಡಿಸಿ ಸದಸ್ಯರಾದ ಮಂಜುಮೋಹನ್, ಗಾಯಿತ್ರಿ, ಮಹೇಶ್ವರಿ, ಪ್ರಾಂಶುಪಾಲ ಕೆ.ಬಿ. ಅನಂತರಾಜ್, ಹಿರಿಯ ಉಪನ್ಯಾಸಕ ಬಿ.ಪಿ. ಬಸವರಾಜ್, ಉಪ ಪ್ರಾಂಶುಪಾಲ ಬೋರಣ್ಣಗೌಡ ಹಾಜರಿದ್ದರು.

# ಸಾಂಸ್ಕೃತಿಕ ಚಟುವಟಿಕೆಗಳೂ ಅತ್ಯಗತ್ಯ



**ಬೇಲೂರು:** ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪಠ್ಯ ಎಷ್ಟು ಮುಖ್ಯವೋ ಹಾಗೆ ಕ್ರೀಡೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಅತ್ಯಗತ್ಯವೆಂದು ಶಾಂತಲಾ ವಿದ್ಯಾ ಸಂಸ್ಥೆ ಅಧ್ಯಕ್ಷ ಬಿ.ಕೆ.ಭಗವಾನ್ ಅವರು ಹೇಳಿದರು.

ಪಟ್ಟಣದ ಶಾಂತಲಾ ವಿದ್ಯಾ ಸಂಸ್ಥೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಾಲೆಗಳಲ್ಲಿ ಮಕ್ಕಳಿಗೆ ಪಠ್ಯದ ಶಿಕ್ಷಣದೊಂದಿಗೆ ಅವರಲ್ಲಿ ಆತ್ಮವಿಶ್ವಾಸ, ಶಿಸ್ತು ಸಂಯಮ, ಕ್ರೀಡೆ ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಪುರಸಭೆ ಅಧ್ಯಕ್ಷೆ ಉಷಾ ಸತೀಶ್, ಶಾಂತಲಾ ವಿದ್ಯಾ ಸಂಸ್ಥೆ ಕಾರ್ಯದರ್ಶಿ ತೊ.ಚ.ಅನಂತ ಸುಬ್ಬರಾವ್, ಉಪಾಧ್ಯಕ್ಷ ಹೆಚ್.ಸಿ.ಸುರೇಶ್, ನಿರ್ದೇಶಕ ಶಿವಶಂಕರ್, ಆಡಳಿತಾಧಿಕಾರಿ ಸುನಿತಾ, ಮುಖ್ಯ ಶಿಕ್ಷಕರಾದ ನಾರಾಯಣ್, ಅಶ್ವಿನಿ. ಲತಾ ಸೇರಿದಂತೆ ಇನ್ನಿತರರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯರ್ಥಿಗಳನ್ನು ಮೈಸೂರಿನ ವಕೀಲ ದಿನಕರ್ ಅಭಿನಂದಿಸಿದರು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿಸಲಾಯಿತು.

## ದುಷ್ಕೃತ್ಯದಲ್ಲಿ ಮನೆಯಲ್ಲಿದ್ದ ಸಾಕು ಪ್ರಾಣಿಗಳು ಬೆಂಕಿಗಾಹುತಿ | ಹಿಂದೂಗಳನ್ನು ಬೆದರಿಸುವ ಬ್ಯಾನರ್‌ಗಳು ಪತ್ತೆ

# ಬಾಂಗ್ಲಾದಲ್ಲಿ ಹಿಂದೂಗಳ ಮನೆಗೆ ಬೆಂಕಿ ಹಚ್ಚಿದ ದುಷ್ಕರ್ಮಿಗಳು

• ಪ್ರಜೋದಯ ವರದಿ

**ಢಾಕಾ:** ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿ ತೀವ್ರಗೊಂಡಿದ್ದು, ದುಷ್ಕರ್ಮಿಗಳ ಗುಂಪು ಹಿಂದೂಗಳಿಗೆ ಸೇರಿದ ಮನೆಯೊಂದಕ್ಕೆ ಬೆಂಕಿ ಹಚ್ಚಿರುವ ಸುದ್ದಿ ಹೊರಬಿದ್ದಿದೆ. ಈ ದುಷ್ಕೃತ್ಯದಲ್ಲಿ ಮನೆಯಲ್ಲಿದ್ದ ಸಾಕು ಪ್ರಾಣಿಗಳು ಮೃತಪಟ್ಟಿದ್ದು, ಮನೆಯ ಸಾಮಗ್ರಿಗಳು ಸಂಪೂರ್ಣ ಸುಟ್ಟು ಹೋಗಿವೆ. ಅದೃಷ್ಟವಶಾತ್, ಕುಟುಂಬ ಸದಸ್ಯರಿಗೆ ಯಾವುದೇ ಹಾನಿಯಾಗಿಲ್ಲ ಎಂದು ತಿಳಿದು ಬಂದಿದೆ.



ಇದೇ ಪ್ರದೇಶದಲ್ಲಿ ಹಿಂದೂಗಳನ್ನು ಬೆದರಿಸುವ ಬ್ಯಾನರ್ ಸಹ ಪತ್ತೆಯಾಗಿದ್ದು, ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ. ಹಿಂದೂಗಳು ಇಸ್ಲಾಂ ವಿರೋಧಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದು, ಕೂಡಲೇ ಅದನ್ನು ನಿಲ್ಲಿಸದಿದ್ದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬ್ಯಾನರ್‌ನಲ್ಲಿ ಬರೆಯಲಾಗಿದೆ. ಚಟ್ಟೋಗ್ರಾಮ್‌ನಲ್ಲಿ ನೆಲೆಸಿರುವ ಜಯಂತಿ ಸಂಘ ಮತ್ತು ಬಾಬು ಶುಕುಶಿಲ್ ಅವರ ಮನೆಗೆ ಬೆಂಕಿ ಹಚ್ಚಲಾಗಿದೆ. ಬೆಂಕಿಯ ಕೆನ್ನಾಲಿಗೆ ಆವರಿಸುತ್ತಿದ್ದಂತೆ ಕ್ಷಣ ಮಾತ್ರದಲ್ಲಿ ಮನೆಯ ಸುತ್ತಲಿನ ಕಾಂಪೌಂಡ್ ಹಾರಿದ ಕುಟುಂಬ ಸದಸ್ಯರು ಹೊರಹೋಗುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಸ್ಥಳೀಯರು ಇಂಡಿಯಾ ಟುಡೇಗೆ ತಿಳಿಸಿದ್ದಾರೆ.

ಆದರೂ, ಮನೆಯಲ್ಲಿದ್ದ ವಸ್ತುಗಳು ನಾಶವಾಗಿದ್ದು, ಸಾಕುಪ್ರಾಣಿಗಳು ಮೃತಪಟ್ಟಿವೆ. ಈ ಪ್ರದೇಶದ ಹಿಂದೂಗಳಿಗೆ ಹೇಳುವುದೇನೆಂದರೆ, ನಿಮ್ಮ ಮೇಲೆ ನಾವು ನಿಗಾ ಇರಿಸಿದ್ದೇವೆ. ನೀವು ಇಸ್ಲಾಂ ಧರ್ಮದ ಮತ್ತು ಮುಸ್ಲಿಂ ಸಮುದಾಯ ವಿರುದ್ಧದ ಚಟುವಟಿಕೆಯ ಆರೋಪಿಗಳಾಗಿದ್ದೀರಿ. ನೀವು ಈ ಕೂಡಲೇ ನಿಮ್ಮ ಚಳವಳಿ, ಸಭೆ ಮತ್ತು ಚಟುವಟಿಕೆಗಳನ್ನು ಸ್ಥಗಿತಗೊಳಿಸಬೇಕು. ಇಲ್ಲವಾದರೆ ಗಂಭೀರ ಪರಿಣಾಮ ಎದುರಿಸುತ್ತೀರಿ ಎಂದು ಬ್ಯಾನರ್‌ನಲ್ಲಿ ಕೈಬರಹದಲ್ಲಿ ಬರೆಯಲಾಗಿದೆ.

ಈ ನಿರ್ದೇಶನಗಳನ್ನು ಪಾಲಿಸುವಲ್ಲಿ ಹಿಂದೂ ಸಮುದಾಯ ವಿಫಲವಾದರೆ, ನಿಮ್ಮ ಮನೆಗಳು, ಆಸ್ತಿ ಮತ್ತು ಉದ್ಯಮಗಳನ್ನು ನಾಶ ಮಾಡುತ್ತೇವೆ. ನಿಮ್ಮನ್ನು ರಕ್ಷಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಬೆದರಿಕೆ ಹಾಕಲಾಗಿದೆ.

ಮೈಮೆನ್ಸಿಂಗ್ ಜಿಲ್ಲೆಯಲ್ಲಿ ದೈವ ದೂಷಣೆಯ ಆರೋಪದ ಮೇಲೆ ದೀಪು ಚಂದ್ರ ದಾಸ್ ಎಂಬ ಹಿಂದೂ ಯುವಕನನ್ನು ಗುಂಪೊಂದು ಹೊಡೆದು ಕೊಂದ ಕೆಲವು ದಿನಗಳ ನಂತರ ಹಿಂದೂಗಳ ಮೇಲೆ ನಡೆದ ಎರಡನೇ ದಾಳಿ ಇದಾಗಿದೆ. ಭಾಲುಕಾ ಉಪ ಜಿಲಾದ ದುಬಾಲಿಯಾ ಪಾರಾ ಪ್ರದೇಶದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ಗಾರ್ಮೆಂಟ್ ನೌಕರ ದಾಸ್, ಪ್ರವಾದಿ ಮುಹಮ್ಮದ್ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದರು.

ಡಿ.16 ರ ರಾತ್ರಿ ದಾಸ್ ಅವರಿಂದ ಒತ್ತಾಯಪೂರ್ವಕವಾಗಿ ರಾಜೀನಾಮೆ ಪಡೆದಿದ್ದ ಕಾರ್ಖಾನೆ ಮಾಲೀಕರು, ಅವರನ್ನು ಕಾರ್ಖಾನೆಯಿಂದ ಹೊರಗೆ ತಳ್ಳಿದ್ದರು. ಬಳಿಕ, ಇಸ್ಲಾಮಿಗಳ ಗುಂಪು ದಾಸ್ ಅವರನ್ನು ಹೊಡೆದು ಕೊಂದು ಮೃತದೇಹವನ್ನು ನೇತು ಹಾಕಿ ಬೆಂಕಿ ಹಚ್ಚಿತ್ತು. ದಾಸ್ ಅವರ ಸಹೋದ್ಯೋಗಿಗಳೇ ಈ ಕ್ರೂರ ಹತ್ಯೆಯಲ್ಲಿ ಭಾಗಿಯಾಗಿದ್ದಾರೆಂದು ವರದಿಯಾಗಿತ್ತು.

## ದಾಳಿಗೆ ವಿಶ್ವಸಂಸ್ಥೆ ಖಂಡನೆ

**ವಿಶ್ವಸಂಸ್ಥೆ:** ಬಾಂಗ್ಲಾದೇಶದಲ್ಲಿ ಹಿಂದೂ ವ್ಯಕ್ತಿಯ ಹತ್ಯೆ ಸೇರಿದಂತೆ ಅಲ್ಲಿನ ಹಿಂಸಾಚಾರದ ಬಗ್ಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಕಳವಳ ವ್ಯಕ್ತಪಡಿಸಿದ್ದಾರೆ. ಬಾಂಗ್ಲಾದೇಶದಲ್ಲಿ ನಾವು ಕಂಡಿರುವ ಹಿಂಸಾಚಾರದ ಬಗ್ಗೆ ನಮಗೆ ತುಂಬಾ ಕಳವಳವಿದೆ ಎಂದು ಪ್ರಧಾನ ಕಾರ್ಯದರ್ಶಿಯ ವಕ್ತಾರ ಸ್ಟೀಫನ್ ಡುಜಾರಿಕ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಮತ್ತು ವಿಶೇಷವಾಗಿ ಕಳೆದ ಕೆಲವು ದಿನಗಳಲ್ಲಿ ಹಿಂದೂಗಳ ಮೇಲೆ ನಡೆದ ಗುಂಪು ಹಲ್ಲೆಗಳಿಗೆ ಪ್ರಧಾನ ಕಾರ್ಯದರ್ಶಿಯ ಪ್ರತಿಕ್ರಿಯೆಯ ಕುರಿತಾದ ಪ್ರಶ್ನೆಗೆ ಅವರು ಉತ್ತರಿಸಿದರು.

ಅದು ಬಾಂಗ್ಲಾದೇಶದಲ್ಲಾಗಲಿ ಅಥವಾ ಬೇರೆ ಯಾವುದೇ ದೇಶವಾಗಲಿ, ಬಹುಸಂಖ್ಯಾತಕ್ಕೆ ಸೇರದ ಜನರು ಸುರಕ್ಷಿತವಾಗಿರಬೇಕು ಮತ್ತು ಎಲ್ಲಾ ಬಾಂಗ್ಲಾದೇಶಿಗಳು ಸುರಕ್ಷಿತವಾಗಿರಬೇಕು. ಮತ್ತು ಪ್ರತಿಯೊಬ್ಬ ಬಾಂಗ್ಲಾದೇಶಿಯರನ್ನು ಸುರಕ್ಷಿತವಾಗಿರಿಸಲು ಸರ್ಕಾರವು ತನ್ನಿಂದ ಸಾಧ್ಯವಿರುವ ಎಲ್ಲವನ್ನೂ ಮಾಡುತ್ತದೆ ಎಂದು ನಮಗೆ ವಿಶ್ವಾಸವಿದೆ ಎಂದು ಡುಜಾರಿಕ್ ಹೇಳಿದರು.

# ರೈತರ ಏಳಿಗೆಯಾದರೆ ಗ್ರಾಮ ಸ್ವರಾಜ್ಯ ಕನಸು ನನಸು

## ಶಾಸಕ ಕೆ.ಎಂ.ಶಿವಲಿಂಗೇಗೌಡ ಪ್ರತಿಪಾದನೆ | ಅರಸೀಕೆರೆಯಲ್ಲಿ ರೈತ ದಿನಾಚರಣೆ

• ಪ್ರಜೋದಯ ವರದಿ

**ಅರಸೀಕೆರೆ:** ಮಹಾತ್ಮ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯ ಕನಸು ನನಸಾಗಬೇಕೆಂದರೆ ದೇಶಕ್ಕೆ ಅನ್ನ ನೀಡುವ ರೈತರ ಬಾಳು ಬೆಳಗಬೇಕೆಂದು ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಕೃಷಿ ಇಲಾಖೆ, ಕೃಷಿಕ ಸಮಾಜ ಹಾಗು ರೈತಪರ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ರೈತ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ರೈತರು ಬೆವರು ಸುರಿಸಿ ದುಡಿದರೆ ಸಮಾಜಕ್ಕೆ ಅನ್ನ ಸಿಗುವುದರ ಜೊತೆಗೆ ದೇಶದ ಅಭಿವೃದ್ಧಿಗೆ ಸಹಕಾರವಾಗುತ್ತದೆ. ಭಾರತದಲ್ಲಿ ಶೇ.75 ರಿಂದ 80ರಷ್ಟು ಜನರು ರೈತರೇ ಆಗಿದ್ದಾರೆ. ಕೃಷಿಯನ್ನೇ ನಂಬಿ ಬದುಕುತ್ತಿರುವ ರಾಷ್ಟ್ರಗಳಲ್ಲಿ ಭಾರತ ಅಗ್ರ ಸ್ಥಾನದಲ್ಲಿದೆಯೆಂದು ತಿಳಿಸಿದರು.

ಸಾಂಪ್ರದಾಯಿಕ ಕೃಷಿಯ ಜೊತೆಗೆ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಹೆಚ್ಚಿನ ಉತ್ಪಾದನೆ ಪಡೆಯುವತ್ತಾ ರೈತರು ಗಮನ ಹರಿಸ ಬೇಕು. ಮೆಕ್ಕೆಜೋಳವನ್ನು ವಾಣಿಜ್ಯ ಬೆಳೆ ಯಾಗಿ ಪರಿಗಣಿಸಿ ಎಥೆನಾಲ್ ಉತ್ಪಾದನೆ ಸೇರಿಮೌಲ್ಯವರ್ಧಿತ ಕೃಷಿಗೆ ಮುಂದಾದರೆ ರೈತರಿಗೆ ಲಾಭ ದೊರೆಯುತ್ತದೆ. ಕಬ್ಬು ಮತ್ತು ಮೆಕ್ಕೆಜೋಳವನ್ನು ದೇಶದಲ್ಲೇ ಖರೀದಿಸಿ ಎಥೆನಾಲ್ ಉತ್ಪಾದಿಸ ಬಹುದಾದರೂ ಈ ಬಗ್ಗೆ ಕೇಂದ್ರ ಸರ್ಕಾರ ಸ್ಪಷ್ಟ ನೀತಿ ರೂಪಿಸದಿರುವುದು ಬೇಸರದ ಸಂಗತಿ ಎಂದರು.



ತಾಲ್ಲೂಕಿನಲ್ಲಿ ರೈತರ ಹಿತದೃಷ್ಟಿಯಿಂದ ತರಕಾರಿ ಮಾರುಕಟ್ಟೆ, ನಿರಂತರ ಜ್ಯೋತಿ ವ್ಯವಸ್ಥೆ, ನೀರಿನ ಸಂರಕ್ಷಣೆಗೆ 2 ಸಾವಿರಕ್ಕೂ ಅಧಿಕ ಚೆಕ್ ಡ್ಯಾಂಗಳ ನಿರ್ಮಾಣ ಸೇರಿ ಹಲವು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ. ಎತ್ತಿನಹೊಳೆ, ಭದ್ರ ಮೇಲ್ದಂಡೆ ಹಾಗು ಹೇಮಾವತಿ ನೀರಾವರಿ ಯೋಜನೆಗಳ ಅನುಷ್ಠಾನದಿಂದ ಮುಂದಿನ ವರ್ಷಗಳಲ್ಲಿ ಬರಗಾಲದ ಆತಂಕದಿಂದ ರೈತರು ಮುಕ್ತರಾಗಲಿದ್ದಾರೆಂದರು.

ಸಹಾಯಕ ಕೃಷಿ ನಿರ್ದೇಶಕ ಶಿವಕುಮಾರ್ ಅವರು ಮಾತನಾಡಿ, ದಿ||ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ಅವರ ಜನ್ಮ ದಿನವನ್ನು ರಾಷ್ಟ್ರೀಯ ರೈತ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ. 1979ರಿಂದ 1980ರವರೆಗೆ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಅವರು ರೈತ ನಾಯಕ ಹಾಗು ಜನಾನುರಾಗಿ ಎಂದು ಖ್ಯಾತರಾಗಿದ್ದರು. ರೈತರ ಸಾಲಭಾರ ನಿವಾರಣೆಗೆ ಸಂಬಂಧಿಸಿದ ಮಸೂದೆಯನ್ನು ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆಂದರು.

ದೇಶದ ಅಭಿವೃದ್ಧಿಗೆ ರೈತರ ಆರ್ಥಿಕ ಬೆಳವಣಿಗೆ ಪ್ರಮುಖವಾಗಿದ್ದು, ರಾಷ್ಟ್ರದ ಜನಸಂಖ್ಯೆಯ ಶೇ.80ರಷ್ಟು ಮಂದಿ ರೈತ ವರ್ಗಕ್ಕೆ ಸೇರಿದವರಾಗಿದ್ದಾರೆ. ರೈತ ದಿನಾಚರಣೆ ಅರ್ಥಪೂರ್ಣ ವಾಗಬೇಕೆಂದರೆ ಸರ್ಕಾರದ ಯೋಜನೆಗಳು ಪರಿಣಾಮಕಾರಿಯಾಗಿ ರೈತರಿಗೆ ತಲುಪಬೇಕೆಂದರು.

ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಧರ್ಮಶೇಖರ್ ಅವರು ಮಾತನಾಡಿ, ಸರ್ಕಾರವು ರೈತರಿಗಾಗಿ ಅನೇಕ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಆದರೆ, ಯೋಜನೆ ಗಳನ್ನು ತಾಲ್ಲೂಕು ಮಟ್ಟಕ್ಕೆ ತಂದು ರೈತರಿಗೆ ನೇರವಿಗೆ ತಲುಪಿಸುವಲ್ಲಿ ಶಾಸಕರ ಪಾತ್ರ ಅಪೂರ್ವವಾಗಿದೆ. ರೈತರಿಗೆ ಅಗತ್ಯವಿರುವ ವಿದ್ಯುತ್, ನೀರು ಹಾಗು ಸರ್ಕಾರದ ಯಂತ್ರೋಪ ಕರಣಗಳು ಸಮಯಕ್ಕೆ ಸರಿಯಾಗಿ ದೊರಕುವಂತೆ ಕಾರ್ಯ ನಿರ್ವಹಿಸಲಾಗುತ್ತಿದೆಂದು ಪ್ರಶಂಸಿಸಿದರು.

ಬರಪೀಡಿತ ಪ್ರದೇಶವಾಗಿದ್ದ ಅರಸೀಕೆರೆ ತಾಲ್ಲೂಕಿಗೆ ವಿವಿಧ ಮೂಲಗಳಿಂದ ನೀರು ತರಿಸಿ ನೀರಾವರಿಗೆ ಆದ್ಯತೆ ನೀಡಲಾಗಿದೆ. ಅದರಿಂದ ರೈತ ಸಮುದಾಯಕ್ಕೆ ಭಾರೀ ಅನುಕೂಲವಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸ್ವ-ಸಹಾಯ ಸಂಘಗಳ ಮಹಿಳೆಯರಿಗೆ 50,000 ರೂ. ಸ್ವತ್ತು ನಿಧಿ ವಿತರಿಸಲಾಯಿತು. ಕಾರ್ಯಕ್ರಮ ಅಂಗವಾಗಿ ಎತ್ತಿನಗಾಡಿ ಮೆರವಣಿಗೆ ನಡೆಸಲಾಯಿತು. ತಹಶೀಲ್ದಾರ್ ಸಂತೋಷ್ ಕುಮಾರ್, ಜಿಲ್ಲಾ ರೈತ ಸಂಘದ ಅಧ್ಯಕ್ಷ ದಯಾನಂದ್, ಟಿಪಿಎಂಸಿ ಅಧ್ಯಕ್ಷ ಕುಮಾರ್ ಮತ್ತಿತರರಿದ್ದರು.

## ಸಾಹಿತಿ ವಿನೋದ್ ಕುಮಾರ್ ಶುಕ್ಲಾ ನಿಧನ

• ಪ್ರಜೋದಯ ವರದಿ



**ರಾಯಪುರ:** ಹಿಂದಿ ಭಾಷೆಯಲ್ಲಿನ ಸಾಹಿತ್ಯ ಸೃಜನೆಗೆ ಜ್ಞಾನಪೀಠ ಪ್ರಶಸ್ತಿ ಪಡೆದಿದ್ದ ಛತ್ತೀಸಗಢದ ಹಿರಿಯ ಸಾಹಿತಿ ವಿನೋದ್ ಕುಮಾರ್ ಶುಕ್ಲಾ ಇಂದು ಸಂಜೆ ನಿಧನರಾಗಿದ್ದಾರೆ. ಅವರಿಗೆ 85 ವರ್ಷ ವಯಸ್ಸಾಗಿತ್ತು.

ವಯೋಸಹಜ ಕಾಯಿಲೆಗಳು ಹಾಗೂ ಉಸಿರಾಟ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ಇತ್ತೀಚೆಗೆ ರಾಯಪುರದ ಏಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಚಿಕಿತ್ಸೆ ಫಲಿಸದೇ ನಿಧನರಾಗಿದ್ದಾರೆಂದು ಅವರ ಕುಟುಂಬಸ್ಥರು ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಶುಕ್ಲಾ ಅವರು ಪತ್ನಿ, ಮಗ, ಮಗಳನ್ನು ಅಗಲಿದ್ದಾರೆ. ಬುಧವಾರ ರಾಯಪುರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ತಿಳಿಸಿದ್ದಾರೆ.

ಕಳೆದ ನ.2 ರಂದು ವಿನೋದ್ ಕುಮಾರ್ ಶುಕ್ಲಾ 59ನೇ ಜ್ಞಾನಪೀಠ ಪ್ರಶಸ್ತಿ ಸ್ವೀಕರಿಸಿದ್ದರು. ಹಿಂದಿಯ ಪ್ರಮುಖ ಸಾಹಿತಿಯಾಗಿದ್ದ ಶುಕ್ಲಾ ಅವರು ಜ್ಞಾನಪೀಠ ಪ್ರಶಸ್ತಿ ಪಡೆದ ಛತ್ತೀಸಗಢ ರಾಜ್ಯದ ಮೊದಲ ಸಾಹಿತಿ ಎಂಬ ಹಿರಿಮೆಗೆ ಪಾತ್ರರಾಗಿದ್ದರು.

ನೌಕರ್ ಕಿ ಕಮೀಜ್, ಕಿಲೇಗಾ ತೊ ದೇಖೆಗಾ ಸೇರಿ ಅನೇಕ ಮಹತ್ವದ ಕೃತಿಗಳನ್ನು ರಚಿಸಿದ್ದರು. ನೌಕರ್ ಕಿ ಕಮೀಜ್ ಕೃತಿ ಆಧರಿಸಿ ಅದೇ ಹೆಸರಿನಲ್ಲಿ ಹಿಂದಿ ಭಾಷೆಯಲ್ಲಿ ಸಿನಿಮಾ ಸಹ (1999) ಬಂದಿತ್ತು.

## ಕಾಲ್ನಡಿಗೆಯಲ್ಲಿ ಸಕಲೇಶಪುರ ಪಟ್ಟಣದ ಸಮಸ್ಯೆ ಆಲಿಸಿದ ಡಿಸಿ

» ಮೊದಲನೇ ಪುಟದಿಂದ

ಆದೇಶಿಸಿದರು. ನಿರ್ಮಾಣ ಹಂತದಲ್ಲಿರುವ ವಾಣಿಜ್ಯ ಕಟ್ಟಡದ ಮುಂಭಾಗದಲ್ಲಿರುವ ಅನಧಿಕೃತ ಅಂಗಡಿಗಳು ಹಾಗು ಪ್ಲಾಸ್ಟಿಕ್ ತೆರವುಗೊಳಿಸಿ, ಕಟ್ಟಡವನ್ನು ಟೆಂಡರ್ ಮೂಲಕ ಬಾಡಿಗೆಗೆ ನೀಡಿ ಪುರಸಭೆಯ ಆದಾಯ ಮೂಲವನ್ನಾಗಿ ಮಾಡಬೇಕೆಂದು ನಿರ್ದೇಶನ ನೀಡಿದರು.

ಹಳೆ ತಾಲ್ಲೂಕು ಪಂಚಾಯಿತಿ ಕಚೇರಿ ಸ್ಥಳಕ್ಕೆ ಭೇಟಿ ನೀಡಿದ ಅವರು, ಅಕ್ರಮ ಅಂಗಡಿಗಳನ್ನು ತೆರವುಗೊಳಿಸಿ ಗೇಟ್ ನಿರ್ಮಿಸಿ ವಾಹನ ನಿಲುಗಡೆ ವ್ಯವಸ್ಥೆ ಕಲ್ಪಿಸಬೇಕು. ಖಾಸಗಿ ವ್ಯಕ್ತಿಗಳು ಹಳೆ ತಾಲ್ಲೂಕು ಕಚೇರಿ ಆವರಣವನ್ನು ದುರುಪಯೋಗಪಡಿಸಿಕೊಂಡು ವಾಣಿಜ್ಯ ಚಟುವಟಿಕೆ ನಡೆಸುತ್ತಿರುವುದು ಕಂಡು ಬಂದಿದ್ದು, ಈ ಸ್ಥಳದಲ್ಲಿ ಖಾಸಗಿ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ನೀಡಬಾರದೆಂದು ತಹಶೀಲ್ದಾರ್‌ಗೆ ಕಟ್ಟುನಿಟ್ಟಿನ ಸೂಚನೆ ನೀಡಿ, ಈ ಸ್ಥಳವನ್ನು ಸಮತಟ್ಟು ಮಾಡಿ, ಮರಗಳನ್ನು ಕಡಿಯಬಾರದೆಂದು ಆದೇಶಿಸಿದರು.

ನಂತರ ಹೊಸ ಬಸ್ ನಿಲ್ದಾಣಕ್ಕೆ ಭೇಟಿ ನೀಡಿದ ಅವರು, ಕೆಎಸ್‌ಆರ್‌ಟಿಸಿ ಸಿಬ್ಬಂದಿಯೊಂದಿಗೆ ಚರ್ಚಿಸಿ ಬಸ್ ನಿಲ್ದಾಣವನ್ನು ಸ್ವಚ್ಛ ಹಾಗು ಸುಸಜ್ಜಿತವಾಗಿ ನಿರ್ವಹಿಸುವಂತೆ ತಿಳಿಸಿದ ಅವರು, ಶೌಚಾಲಯಗಳಿಂದ ಹೊರ ಬರುವ ತ್ಯಾಜ್ಯ ನೀರನ್ನು ಕೆರೆಗೆ ಹರಿಬಿಡಬಾರದು. ಪರ್ಯಾಯ ವ್ಯವಸ್ಥೆಯನ್ನು ತಕ್ಷಣ ಜಾರಿಗೆ ತರಬೇಕೆಂದು ನಿರ್ದೇಶಿಸಿದರು.

ಜಿಲ್ಲಾಧಿಕಾರಿ ಲತಾಕುಮಾರಿ ಅವರು ಮಾತನಾಡಿ, ಸಕಲೇಶಪುರ ಒಂದು ಸುಂದರ ಪಟ್ಟಣ. ಹಲವರು ಹೇಳುವಂತೆ ಇದು ಮಲೆನಾಡಿನ ಹೆಬ್ಬಾಗಿಲು. ಇಲ್ಲಿಂದಲೇ ಘಟ್ಟ ಪ್ರದೇಶಗಳಿಗೆ ತೆರಳಬೇಕಾಗುತ್ತದೆ. ಅಷ್ಟು ಸುಂದರವಾದ ಪಟ್ಟಣವನ್ನು ಸುಂದರವಾಗಿಸುವುದು ನಮ್ಮೆಲ್ಲರ ಕರ್ತವ್ಯವೆಂದರು.

ಪಟ್ಟಣದಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ದೂರುಗಳು ಬಂದ ಹಿನ್ನಲೆ, ಇಂದು ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಲಾಗಿದ್ದು, ಪರಿಹಾರಕ್ಕಾಗಿ ಕ್ರಮ ಕೈಗೊಳ್ಳಲಾಗುವುದು. ಪ್ರತಿ ವಾರ ಸಿಟಿ ರೌಂಡ್ಸ್ ನಡೆಸಲಾಗುತ್ತಿದ್ದು, ಫುಟ್‌ಪಾತ್ ಅತಿಕ್ರಮಣ, ರಸ್ತೆ ಅವ್ಯವಸ್ಥೆ, ವಿಶೇಷವಾಗಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸುತ್ತಮುತ್ತ ಪಾರ್ಕಿಂಗ್ ಸಮಸ್ಯೆಗಳು ಸೇರಿ ಹಲವು ಸಮಸ್ಯೆಗಳು ಕಂಡುಬಂದಿವೆ. ನಿಗದಿತ ಅವಧಿಯೊಳಗೆ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಒದಗಿಸಲಾಗುವುದದೆಂದು ತಿಳಿಸಿದರು.

ತಹಶೀಲ್ದಾರ್ ಸುಪ್ರೀತ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರ್, ಪುರಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ, ವಲಯ ಅರಣ್ಯಅಧಿಕಾರಿಹೇಮಂತ್‌ಕುಮಾರ್, ಇನ್ಸ್‌ಪೆಕ್ಟರ್‌ಪ್ರಕಾಶ್ ಹಾಜರಿದ್ದರು.

# ಪೊಲೀಸ್-ಪತ್ರಕರ್ತರ ನಡುವೆ ಕ್ರಿಕೆಟ್ ಪಂದ್ಯಾವಳಿ

• ಪ್ರಜೋದಯ ವರದಿ

**ಹಾಸನ:** ಪೊಲೀಸ್ ಇಲಾಖೆ ಮತ್ತು ಜಿಲ್ಲಾ ಪತ್ರಕರ್ತರ ಸಂಘದ ನಡುವಿನ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿ ನಗರದ ಡಿಎಆರ್ ಮೈದಾನದಲ್ಲಿ ಮಂಗಳವಾರ ನಡೆಯಿತು.

ಮೂರು ಪಂದ್ಯಗಳಲ್ಲಿ ಉತ್ತಮವಾಗಿ ಆಟವಾಡಿದ ಪೊಲೀಸ್ ತಂಡ ಜಯಭೇರಿ ಬಾರಿಸಿತು. ವಿಜೇತ ತಂಡಗಳ ನಾಯಕರಾದ ಡಿವೈಎಸ್ಪಿ ಮಾಲತೇಶ್, ಇನ್ಸ್‌ಪೆಕ್ಟರ್ ವಿನಯ್ ಅವರಿಗೆ ಜಿಲ್ಲಾ ಪತ್ರಕರ್ತರ ಸಂಘದ ಪರವಾಗಿ ಜೆ.ಆರ್.ಕೆಂಚೇಗೌಡ ಮತ್ತು ಹೆಚ್.ಬಿ.ಮದನಗೌಡ ಅವರು ನಗದು ಬಹುಮಾನ ನೀಡಿ ಅಭಿನಂದಿಸಿದರು.

ಈ ವೇಳೆ ಆಗಮಿಸಿದ ಜಿಲ್ಲಾ ಪೊಲೀಸ್‌ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರನ್ನು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರು -ಪದಾಧಿಕಾರಿಗಳು ಅಭಿನಂದಿಸಿದರು.

ಪಂದ್ಯ ಪ್ರಾರಂಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಡಾ. ಶ್ರೀನಿಧಿ, ಜಿಲ್ಲಾ ಪತ್ರ ಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಹಾಗು ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಬ್ಯಾಟಿಂಗ್ ಮತ್ತು ಬೌಲಿಂಗ್ ಮಾಡುವ ಮೂಲಕ ಚಾಲನೆ ನೀಡಿದರು.



ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಯಾವುದೇ ಕ್ರೀಡೆಯಲ್ಲಿ ಸೋಲು-ಗೆಲುವು ಸಾಮಾನ್ಯ. ಸೋತಾದ ಕುಗ್ಗದೆ, ಗೆದ್ದಾಗ ಹಿಗ್ಗದೆ ಪ್ರೀತಿ, ಸ್ನೇಹ ಬಾಂಧವ್ಯ ಮುಂದುವರಿಸಿ ಕೊಂಡು ಹೋಗಬೇಕು. ಅದಕ್ಕೆಂದೇ ಪಂದ್ಯಾವಳಿ ಆಯೋಜನೆ ಮಾಡಿದ್ದೇವೆ. ಎಲ್ಲರೂ ಕ್ರೀಡಾ ಮನೋಭಾವದಿಂದ ಆಡಿ ಗೆಲುವು ಸಾಧಿಸಿ ಎಂದು ಹೇಳಿದರು.

ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಜಿಲ್ಲೆಯಲ್ಲಿ ಮೊದಲಿಂದಲೂ ಪೊಲೀಸರು ಮತ್ತು ಪತ್ರಕರ್ತರ ನಡುವೆ ಕ್ರಿಕೆಟ್ ಪಂದ್ಯಾವಳಿ ನಡೆಯುತ್ತಾ ಬಂದಿದೆ. ಇಬ್ಬರೂ ಒಂದೊಂದು ರೀತಿಯಲ್ಲಿ ಸಾಮಾಜಿಕ ಸೇವೆಯಲ್ಲಿ ತೊಡಗಿ, ಸಾರ್ವಜನಿಕ ಸೇವೆ ಮಾಡುತ್ತಿರುತ್ತೇವೆ. ಪೊಲೀಸರು -ಪತ್ರಕರ್ತರ ನಡುವೆ ಅವಿನಾಭಾವ ಸಂಬಂಧ ಇರುವುದು ಒಳ್ಳೆಯ ಬೆಳವಣಿಗೆ, ಇದು ಹೀಗೆಯೇ ಮುಂದುವರಿಯುವುದು ಸ್ವಾಗತಾರ್ಹ ಹಾಗು ಉತ್ತಮ ಬೆಳವಣಿಗೆ ಎಂದರು.

ಎಎಸ್‌ಪಿ ಡಾ.ಶ್ರೀನಿಧಿ ಅವರು ಮಾತನಾಡಿ, ಪೊಲೀಸರು ಮತ್ತು ಪತ್ರಕರ್ತರು ಸದಾ ಒತ್ತಡದಲ್ಲಿ ಕೆಲಸ ಮಾಡುವವರು. ಸಿಕ್ಕ ಬಿಡುವಿನಲ್ಲಿ ಈ ರೀತಿಯ ಪಂದ್ಯಾವಳಿ ಆಡುವುದು ಇಬ್ಬರ ನಡುವೆ ಬಾಂಧವ್ಯ ವೃದ್ಧಿಗೆ ಸಹಕಾರಿ ಆಗಲಿದೆ. ಸಂಬಂಧ ಮತ್ತಷ್ಟು ಗಟ್ಟಿಯಾಗಲಿದೆ ಎಂದು ಹೇಳಿದರು.

ಸಕಲೇಶಪುರ ಡಿವೈಎಸ್ಪಿ ಮಾಲತೇಶ್, ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷರಾದ ಎನ್. ನಂಜುಂಡೇಗೌಡ, ಜಿ.ಪ್ರಕಾಶ್, ಮಾಜಿ ಅಧ್ಯಕ್ಷರಾದ ಬಾಳ್ಳುಗೋಪಾಲ್, ಬಿ.ಆರ್. ಉದಯ ಕುಮಾರ್, ರವಿನಾಕಲಗೂಡು, ಹಿರಿಯ ಪತ್ರಕರ್ತರ ಉದಯರವಿ, ಸಂಘದ ಪದಾಧಿಕಾರಿಗ ಳಾದ ಕೆ.ಜಿ.ಸುರೇಶ್, ಬಿ.ಆರ್.ಬೊಮ್ಮೇಗೌಡ, ಕೆ.ಎಂ. ಹರೀಶ್, ಕುಶ್ವಂತ್, ತ್ಯಾಗರಾಜ್ (ಪ್ರಕಾಶ್) ಇದ್ದರು.

# ಹಾಸನ ಮಾರ್ಗವಾಗಿ ವಂದೇ ಭಾರತ್ ರೈಲು ಸಂಚಾರಕ್ಕೆ ಪತ್ರ

## ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್‌ಗೆ ಮನವಿ ಮಾಡಿದ ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ

**ನವದೆಹಲಿ:** ಬೆಂಗಳೂರು, ರಾಜ್ಯದ ಕರಾವಳಿ ಪ್ರದೇಶಗಳ ನಡುವೆ ಪ್ರಯಾಣವನ್ನು ಮತ್ತಷ್ಟು ಸುಲಭಗೊಳಿಸುವ ನಿಟ್ಟಿನಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆ ಆರಂಭಿಸುವಂತೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮನವಿ ಮಾಡಿದ್ದಾರೆ.

ಈ ಸಂಬಂಧ ರೈಲ್ವೆ ಸಚಿವರಿಗೆ ಪತ್ರ ಬರೆದಿರುವ ಕುಮಾರಸ್ವಾಮಿ ಅವರು, ಬೆಂಗಳೂರು ನಗರದಿಂದ ಹಾಸನ-ಮಂಗಳೂರು ಜಂಕ್ಷನ್, ಉಡುಪಿ ಮತ್ತು ಕಾರವಾರ ಮಾರ್ಗವಾಗಿ ಗೋವಾದ ಮಡಗಾಂವ್‌ವರೆಗೆ ಅತಿವೇಗದ ವಂದೇ ಭಾರತ್ ರೈಲು ಸೇವೆ ಆರಂಭಿಸುವಂತೆ ಕೋರಿದ್ದಾರೆ.

ಈ ಭಾಗದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ವಂದೇ ಭಾರತ್ ರೈಲು ಸಂಚಾರಕ್ಕೆ ಅವಕಾಶ ನೀಡುವುದರಿಂದ ಕರಾವಳಿ ಭಾಗದ ಜನರಿಗೆ ಹೆಚ್ಚು ಅನುಕೂಲ ಆಗಲಿದೆ. ಅಭಿವೃದ್ಧಿಗೂ ಹೆಚ್ಚು ಪೂರಕವಾಗಿರುತ್ತದೆ. ಪಶ್ಚಿಮಘಟ್ಟ ಪ್ರದೇಶ ಸೇರಿ ಈ ಮಾರ್ಗ ದಲ್ಲಿ ವಿದ್ಯುದೀಕರಣ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡಿರುವ ಹಿನ್ನಲೆ ವೇಗದ ರೈಲು ಸೇವೆ ಆರಂಭಿಸಲು ಇದೀಗ ಸರ್ವ ರೀತಿಯ ಅನುಕೂಲಕರ ಮೂಲಸೌಲಭ್ಯಗಳಿವೆ ಎಂದು ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ.



### ಯಾವ ಮಾರ್ಗದಲ್ಲಿ

ಹಾಸನ, ಮಂಗಳೂರು ಜಂಕ್ಷನ್, ಉಡುಪಿ, ಕಾರವಾರ ಮಾರ್ಗವಾಗಿ ಗೋವಾದ ಮಡ ಗಾಂವ್‌ಗೆ ಸಂಪರ್ಕ ಕಲ್ಪಿಸುವ ವಂದೇ ಭಾರತ್ ರೈಲು ಸೇವೆಯಿಂದ ಪ್ರವಾಸೋದ್ಯಮಕ್ಕೆ ಹೆಚ್ಚು ಅನುಕೂಲ ಆಗಲಿದೆ. ಕರಾವಳಿ ಭಾಗದಲ್ಲಿರುವ ಪುಣ್ಯಕ್ಷೇತ್ರಗಳಿಗೆ ಯಾತ್ರಾರ್ಥಿಗಳು ಹೋಗಿ ಬರುವುದು ಸುಲಭವಾಗುತ್ತದೆ. ಶಿಕ್ಷಣ ಹಾಗು ವೃತ್ತಿ ಪರ ಕಾರಣಗಳಿಗಾಗಿ ಈ ಮಾರ್ಗದಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ಹೆಚ್ಚಿನ ಪ್ರಯೋಜನ ಆಗಲಿದೆ ಎಂದು ಗಮನ ಸೆಳೆದಿದ್ದಾರೆ.

ಭಾರತದ ಐಟಿ ರಾಜಧಾನಿ ಆಗಿರುವ ಬೆಂಗಳೂರು ಮತ್ತು ಬಂದರು ನಗರ ಮಂಗಳೂರು ಸೇರಿ ಕರಾವಳಿ ಕರ್ನಾಟಕದ ಉಳಿದೆಲ್ಲಾ ಪ್ರಮುಖ ವಾಣಿಜ್ಯ ಕೇಂದ್ರಗಳು, ಬಂದರುಗಳು ಮತ್ತು ಪ್ರವಾಸಿ ತಾಣಗಳಿಗೆ ಹಾಗು ಗೋವಾ ನಡುವೆ ನೇರ, ವೇಗದ ರೈಲು ಸಂಪರ್ಕ ಕಲ್ಪಿಸುವುದರಿಂದ ಆರ್ಥಿಕ ಚಟುವಟಿಕೆಗಳು ಮತ್ತಷ್ಟು ಚುರುಕಾಗಲಿವೆ ಎಂದು ತಿಳಿಸಿದ್ದಾರೆ.

ಈ ರೈಲು ಸೇವೆ ಆರಂಭಿಸುವುದರಿಂದ ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆ ಈಡೇರಿಸಿದಂತೆ ಆಗುತ್ತದೆ. ಪ್ರಾದೇಶಿಕ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸುತ್ತದೆ. ಮಿಗಿಲಾಗಿ ಪ್ರವಾಸೋದ್ಯಮಕ್ಕೆ ಉತ್ತೇಜನ ದೊರೆಯಲಿದೆ. ಉದ್ಯೋಗಾವಕಾಶಗಳ ವೃದ್ಧಿಗೂ ಸಹಕಾರಿಯಾಗಲಿದೆ. ಸಮಗ್ರ, ದಕ್ಷ ಮತ್ತು ಅತ್ಯಾಧುನಿಕ ಧ್ಯೇಯ ಕಾರ್ಯಜಾಲದ ಸರ್ಕಾರದ ಮುನ್ನೋಟಕ್ಕೆ ಸಂಬಂಧಿಸಿದಂತೆ ಅಂತರರಾಜ್ಯ ರೈಲು ಸಂಪರ್ಕವನ್ನು ಬೆಸೆಯುತ್ತದೆಂದು ಅವರು ಪ್ರತಿಪಾದಿಸಿದ್ದಾರೆ.

ಈ ಹಿನ್ನಲೆ ಮನವಿಯನ್ನು ಪರಿಗಣಿಸಿ ವಂದೇ ಭಾರತ್ ರೈಲು ಸೇವೆ ಆರಂಭಿಸುವ ಸಾಧ್ಯಾ ಸಾಧ್ಯತೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ನೈರುತ್ಯ ರೈಲ್ವೆಯ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ರೈಲ್ವೆ ಸಚಿವರಿಗೆ ಮನವಿ ಮಾಡಿದ್ದಾರೆ.

## ಚಿನ್ನಸ್ವಾಮಿ ಪಂದ್ಯ ಬಿಸಿಸಿಐ ಶ್ರೇಷ್ಠತಾ ಕೇಂದ್ರಕ್ಕೆ ಸ್ಥಳಾಂತರ

ಪ್ರಜೋದಯ ವರದಿ

**ಬೆಂಗಳೂರು:** ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆಯಬೇಕಿದ್ದ ವಿಜಯ್ ಹಜಾರೆ ಪಂದ್ಯಕ್ಕೆ ಪೊಲೀಸರು ಅನುಮತಿ ನಿರಾಕರಿಸಿರುವ ಹಿನ್ನಲೆಯಲ್ಲಿ ಈ ಪಂದ್ಯವನ್ನು ಬಿಸಿಸಿಐ ಶ್ರೇಷ್ಠತಾ ಕೇಂದ್ರಕ್ಕೆ (ಸಿಇಒ) ಸ್ಥಳಾಂತರಿಸಲಾಗಿದೆ.

ಈ ಮೊದಲು ಸುದ್ದಿಗಾರರೊಂದಿಗೆ ಮಾತನಾಡಿದ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ಎಲ್ಲಾ ಇಲಾಖೆಗಳ ವರದಿ ಆಧರಿಸಿ ಪಂದ್ಯ ನಡೆಸಲು ಅನುಮತಿ ಕೋರಿದ ಕೆಎಸ್‌ಸಿಎ ಮನವಿಯನ್ನು ತಿರಸ್ಕರಿಸಲಾಗಿದೆ ಎಂದಿದ್ದರು.

ಡಿಸೆಂಬರ್ 24ರಂದು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಡಿ ಗುಂಪಿನಲ್ಲಿ ದೆಹಲಿ ಮತ್ತು ಆಂಧ್ರ ತಂಡಗಳ ನಡುವೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ನಿಗದಿಯಾಗಿತ್ತು. ದೆಹಲಿ ತಂಡವನ್ನು ಪ್ರತಿನಿಧಿಸುತ್ತಿರುವ ವಿರಾಟ್ ಕೊಹ್ಲಿ ಈ ಪಂದ್ಯದಲ್ಲಿ ಭಾಗವಹಿಸಬೇಕಿತ್ತು. ಪ್ರಸ್ತುತ ಪಂದ್ಯವನ್ನು ಬಿಸಿಸಿಐ ಸಿಇಒ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

# ಏತ ನೀರಾವರಿ ಯೋಜನೆಗಳಿಂದ ಕೆರೆಗಳಿಗೆ ನೀರು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ನವಿಲೆ, ಕಲ್ಲೇಸೋಮನಹಳ್ಳಿ, ಬಾಗೂರು ಹಾಗು ಅಲ ಗೊಂಡನಹಳ್ಳಿ ಏತ ನೀರಾವರಿ ಯೋಜನೆ ಮೂಲಕ ನುಗ್ಗೇಹಳ್ಳಿ ಹೋಬಳಿ ವ್ಯಾಪ್ತಿಯ ಬಹು ತೇಕ ಕೆರೆಗಳ ಭರ್ತಿಗೆ ಕ್ರಮ ವಹಿಸಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಗೋವಿನಕೆರೆ ಗ್ರಾಮದಲ್ಲಿ ಮಂಗಳವಾರ 1 ಕೋಟಿ ರೂ. ವೆಚ್ಚದ ಕಾಂಕ್ರಿಟ್ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಬಾಗೂರು ಏತ ನೀರಾವರಿ ಯೋಜನೆ ಗೋವಿನಕೆರೆ, ಬಿ. ಹೊನ್ನೇನಹಳ್ಳಿ, ಓಬಳಾಪುರ ಹಾಗು ದಡ್ಡಿಹಳ್ಳಿ ಸೇರಿ ಅನೇಕ ಕೆರೆಗಳನ್ನು ಕಳೆದ 3-4 ವರ್ಷಗಳಿಂದ ತುಂಬಿಸಲಾಗುತ್ತಿದೆ. ಜೊತೆಗೆ ನವಿಲೆ ಏತ ನೀರಾವರಿ ಯೋಜನೆ ಮೂಲಕ ಅಣತಿ ಭಾಗದ ಕೆರೆ ಹಾಗು ನವಿಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸಲಾ ಗುತ್ತಿದೆ. ಕಳೆದ ವರ್ಷ ಚಾಲನೆ ನೀಡಲಾಗಿದ್ದ ಕಲ್ಲೇಸೋಮನಹಳ್ಳಿ ಏತ ನೀರಾವರಿ ಯೋಜನೆ ಮೂಲಕ ಎಂ.ಶಿವರ ಹಾಗು ಕೆಂಬಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ 25ಕ್ಕೂ ಹೆಚ್ಚು ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಈಗಾಗಲೇ ಬಹುತೇಕ ಕೆರೆಗಳು ತುಂಬಿವೆ ಎಂದರು.



ಅಲಗೊಂಡನಹಳ್ಳಿಏತ ನೀರಾವರಿ ಯೋಜನೆ ಮೂಲಕ ಕುಂಬಾರಹಳ್ಳಿ, ಬ್ಯಾಡರಹಳ್ಳಿ ಭಾಗದ ಕೆರೆ ತುಂಬಿಸಲಾಗಿದೆ. ಎಲ್ಲಾ ಯೋಜನೆಗಳು ಸಂಪೂರ್ಣವಾಗಿ ಯಶಸ್ವಿಗೊಂಡಿರುವುದರಿಂದ ಹೋಬಳಿಯಲ್ಲಿ ನೂರಕ್ಕೆ ನೂರರಷ್ಟು ನೀರಾವರಿ ಯೋಜನೆ ಸಹಕಾರಗೊಂಡಿದೆ ಎಂದು ತಿಳಿಸಿದರು.

ಗೋವಿನಕೆರೆ ಗ್ರಾಮದ ಕೆರೆ ಏರಿ ಮೇಲ್ಭಾಗದ ರಸ್ತೆಯು ಕಲ್ಲೇಸೋಮನಹಳ್ಳಿ ಗ್ರಾಮಕ್ಕೆ ಸಂಪರ್ಕಿಸಲಿದ್ದು ಕೆರೆ ಏರಿ ಮೇಲ್ಭಾಗ 1 ಕಿ.ಮೀ. ಕಾಂಕ್ರಿಟ್ ರಸ್ತೆ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನ ನೀಡಲಾಗಿದೆ. ಲಕ್ಷ್ಮೀದೇವಿ ದೇವಾಲಯದ ಹೊರಗಿನ ರಸ್ತೆ ಅಭಿವೃದ್ಧಿಗೂ ಗಮನಹರಿಸಲಾಗಿದೆ ಎಂದರು.

ಎಂ.ಶಿವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ವ್ಯಾಪ್ತಿಯ ರೈತರಿಗೂ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಲಾಗಿದ್ದು ಹೊಸ ಷೇರುದಾರ ರೈತರಿಗೆ ಸದ್ಯದಲ್ಲೇ ಸಾಲ ಕೊಡಿಸುವುದಾಗಿ ಭರವಸೆ ನೀಡಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮರಿದೇವೇಗೌಡ ಅವರು ಮಾತನಾಡಿ, ಕ್ಷೇತ್ರದ ಶಾಸಕ ಸಿ. ಎನ್.ಬಾಲಕೃಷ್ಣ ಅವರು ಹೋಬಳಿ ವ್ಯಾಪ್ತಿಯಲ್ಲಿ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿದ್ದಾರೆ. ಗೋವಿನ ಕೆರೆಯಿಂದ ಓಬಳಾಪುರ ವರೆಗಿನ ರಸ್ತೆ ಅಭಿವೃದ್ಧಿಗೆ ಅನುದಾನ ನೀಡುವಂತೆ ಒತ್ತಾಯಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಯನ ಮಧು, ಅಣ್ಣೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ವಿ.ಎನ್. ಮಂಜುನಾಥ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಓಬಳಾಪುರ ಬಸವರಾಜ್, ಉದ್ಯಮಿ ಅಣತಿ ಯೋಗೀಶ್, ಗುತ್ತಿಗೆದಾರ ಬಾಗೂರು ಮನುಕುಮಾರ್, ಮುಖಂಡರಾದ ಮರುವನಹಳ್ಳಿ ದೇವರಾಜ್, ವೈರಮುಡಿಗೌಡ, ತಮ್ಮಯ್ಯಣ್ಣ, ರಾಮು, ರಮೇಶ್, ರಾಜು, ಕಾವೇರಿ ನೀರಾವರಿ ನಿಗಮದ ಸಹಾಯಕ ಇಂಜಿನೀಯರ್‌ಗಳಾದ ಪುನೀತ್, ವಿಜಯಕುಮಾರ್ ಹಾಗು ಇತರರಿದ್ದರು.

## 17ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ರಾಯಭಾರಿಯಾಗಿ ಪ್ರಕಾಶ್ ರಾಜ್



• ಪ್ರಜೋದಯ ವರದಿ

**ಬೆಂಗಳೂರು:** ಜನವರಿ 29ರಿಂದ ಫೆಬ್ರುವರಿ 6ರವರೆಗೆ ನಡೆಯಲಿರುವ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ನಟ ಪ್ರಕಾಶ್ ರಾಜ್ ಅವರು ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಹಿತಿ ಹಂಚಿಕೊಂಡಿದ್ದಾರೆ.

ವಿಧಾನಸೌಧದ ಮುಂಭಾಗದಲ್ಲಿ 17ನೇ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ ಉದ್ಘಾಟನೆ ಆಗಲಿದೆ. ಈ ಬಾರಿಯ ಸಿನಿಮೋತ್ಸವದಲ್ಲಿ ಮಹಿಳಾ ಸಬಲೀಕರಣ ಆಧಾರಿತ ಚಿತ್ರಗಳಿಗೆ ಆದ್ಯತೆ ನೀಡಲಾಗುತ್ತದೆ. ರಾಜಾಜಿನಗರದ ಲುಲುಮಾಲ್‌ನಲ್ಲಿರುವ ಸಿನಿ ಪೊಲೀಸ್‌ನ 11 ಪರದೆ ಗಳಲ್ಲಿ ಹಾಗೂ ಡಾ.ರಾಜ್ ಕುಮಾರ್ ಭವನ, ಕಲಾವಿದರ ಸಂಘ, ಚಾಮ ರಾಜಪೇಟೆ ಹಾಗೂ ಬನಶಂಕರಿಯಲ್ಲಿರುವ ಸುಚಿತ್ರ ಫಿಲಂ ಸೊಸೈಟಿ ಚಿತ್ರ ಮಂದಿರದಲ್ಲಿ ಚಲನಚಿತ್ರಗಳ ಪ್ರದರ್ಶನ ನಡೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

ಕನ್ನಡ ಮತ್ತು ಭಾರತೀಯ ಚಿತ್ರಗಳು ಸೇರಿ 60ಕ್ಕೂ ಹೆಚ್ಚು ದೇಶಗಳ 200 ಚಲನಚಿತ್ರಗಳು ಪ್ರದರ್ಶನಗೊಳ್ಳಲಿದೆ. ವಿಶ್ವದ ಪ್ರತಿಷ್ಠಿತ ಚಲನಚಿತ್ರೋತ್ಸವಗಳಲ್ಲಿ ಪಾಲ್ಗೊಂಡು ವಿವಿಧ ಪ್ರಶಸ್ತಿಗಳನ್ನು ಪಡೆದ ಮತ್ತು ಜನಮನ್ನಣೆಗಳಿಸಿದ ದೇಶ-ವಿದೇಶದ ಅತ್ಯುತ್ತಮ ಚಲನಚಿತ್ರಗಳು 17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಭಾಗವಹಿಸುತ್ತಿವೆಂದು ತಿಳಿಸಿದ್ದಾರೆ.

ಕಾನ್ಸ್ (ಫ್ರಾನ್ಸ್), ಬರ್ಲಿನ್ (ಜರ್ಮನಿ), ವೆನಿಸ್ (ಇಟಲಿ), ಕಾರ್ಲೋವಿ ವೇರಿ (ಜೆಕ್ ರಿಪಬ್ಲಿಕ್, ಲೊಕಾರ್ನೊ (ಸ್ವಿಟ್ಜರ್ಲೆಂಡ್), ರಾಟರ್‌ಡ್ಯಾಮ್ (ನೆದರ್ ಲ್ಯಾಂಡ್), ಬೂಸಾನ್ (ದಕ್ಷಿಣ ಕೊರಿಯಾ), ಟೊರಂಟೋ (ಕೆನಡಾ) ದೇಶಗಳ ಚಿತ್ರೋತ್ಸವದಲ್ಲಿ ಭಾಗವಹಿಸಿ ಪ್ರಶಸ್ತಿ, ಮೆಚ್ಚುಗೆ ಪಡೆದ ಚಲನಚಿತ್ರಗಳು ಬೆಂಗಳೂರು ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಲಿವೆ.

## ಕಾಫಿ ಧಾರಣೆ: 50 ಕೆ.ಜಿ.ಗೆ)

| ಟ್ರೇಡರ್ಸ್ | ಎಪಿ | ಎಸಿ | ಆರ್‌ಪಿ | ಆರ್‌ಸಿ |
| --- | --- | --- | --- | --- |
| ವೆಸ್ಟರ್ನ್ ಕಾಫಿ | 26,500 | 14,200 | 17,000 | 9,250 |
| ಹಾದಿ ಕಾಫಿ | 26,500 | 14,500 | 16,500 | 9,100 |
| ಲಿಖಿತ್‌ಕಾಫಿ ಸಕಲೇಶಪುರ | 26,300 | 14,500 | 16,500 | 9,100 |
| ಗ್ರೈನ್‌ಕಾಫಿ ಸಕಲೇಶಪುರ | 26,500 | 13,600 | 16,000 | 9,200 |
| ಬಾಳ್ಳುಪೇಟೆ | 26,500 | 13,800 | 16,500 | 8,600 |
| ಚಿಕ್ಕಮಗಳೂರು | 26,500 | 14,000 | 16,700 | 9,100 |

# ಹಳೇಬೀಡಿನಲ್ಲಿ ಆಳ್ವಾಸ್ ನುಡಿ ಸಿರಿ ವೈಭವ ಸಂಭ್ರಮ

• ಪ್ರಜೋದಯ ವರದಿ

**ಹಳೇಬೀಡು:** ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲಾ ಆವರಣದಲ್ಲಿ ಮಂಗಳವಾರ ಸಂಜೆ ಶಾಂತಲಾ ಮಹೋತ್ಸವ ವೇದಿಕೆ ಹಾಗು ಆಳ್ವಾಸ್ ಸಂಸ್ಥೆಯಿಂದ ಹಮ್ಮಿಕೊಂಡಿದ್ದ ಆಳ್ವಾಸ್ ನುಡಿ ಸಿರಿ ವೈಭವ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

ಆಳ್ವಾಸ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೇಕ್ಷಕರು ಫಿದಾ ಆದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷ ಡಾ.ಮೋಹನ್ ಆಳ್ವ ಅವರು ಮಾತನಾಡಿ, ಆಳ್ವಾಸ್ ನುಡಿ ಸಿರಿಯು ಮನರಂಜನೆ ಜೊತೆಗೆ ನೂರು ಸಂದೇಶ ನೀಡುತ್ತಿದೆ. 17 ಸಲ ಮೂಡುಬಿದಿರೆಯಲ್ಲಿ ನುಡಿ ಸಿರಿ ನಡೆಸಿದ್ದೇವೆ. ಪ್ರತಿ ವರ್ಷ 50 ಸಾವಿರ ಜನರು ವೀಕ್ಷಿಸುತ್ತಾರೆ. ಕನ್ನಡದ ಮೇಲಿನ ಪ್ರೀತಿಯಿಂದ ವಿದೇಶಿಗರು ಬರುತ್ತಾರೆಂದರು.

ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಮಾತನಾಡಿ, ಭಾರತ ಕಲೆ ಸಂಸ್ಕೃತಿಗೆ ಹೆಸರಾಗಿದೆ. ದೇಶದ ಸಂಸ್ಕೃತಿ ಉಳಿಸಲು ಆಳ್ವಾಸ್ ಪ್ರತಿಷ್ಠಾನ ಮಾಡುತ್ತಿರುವ ಕಾರ್ಯಗಳು ಶ್ಲಾಘನೀಯ. ಹಳೇಬೀಡಿನಲ್ಲಿ ಕಾರ್ಯಕ್ರಮ ನಡೆಸುತ್ತಿರುವುದರಿಂದ ಇತಿಹಾಸ ಬರೆ ದಂತಾಗಿದೆ ಎಂದರು.



ಶಾಸಕ ಹೆಚ್.ಕೆ.ಸುರೇಶ್ ಅವರು ಮಾತನಾಡಿ, ಮಾಜಿ ಶಾಸಕ ಕೆ.ಎಸ್. ಲಿಂಗೇಶ್ ಅವರ ಕಾಲದಲ್ಲಿ ಮಂಜೂರಾದ 5 ಕೋಟಿ ರೂ. ವೆಚ್ಚದ ಹಳೇಬೀಡು ಮುಖ್ಯ ರಸ್ತೆ ಕಾಮಗಾರಿ ಮುಗಿದಿದೆ. ಹೊಯ್ಸಳ ವೃತ್ತದಿಂದ ಜೈನ ಬಸದಿ ವರೆಗೆ ರಸ್ತೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಬೇಲೂರು ಹಳೇಬೀಡು ಪ್ರಾಧಿಕಾರ ಆರಂಭಿಸುವ ಕುರಿತು ಸದನದಲ್ಲಿ ಪ್ರಸ್ತಾಪಿಸಲಾಗಿದೆ ಎಂದರು.

ಶಾಂತಲಾ ಮಹೋತ್ಸವ ಸಮಿತಿ ಅಧ್ಯಕ್ಷ ಕೆ.ಎಸ್.ಲಿಂಗೇಶ್, ಧರ್ಮಸ್ಥಳ ಆಯುರ್ವೇದ ಕಾಲೇಜು ಪ್ರಾಂಶುಪಾಲಡಾ.ಪ್ರಸನ್ನ ಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಹೆಚ್. ಆರ್.ಮಧು, ಮೋಹನ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಇ.ಹೆಚ್.ಲಕ್ಷ್ಮಣ್, ಪದಾಧಿಕಾರಿಗಳಾದ ಎ.ಎಸ್. ಬಸವರಾಜು, ಗಂಗೂರು ಶಿವಕುಮಾರ್, ಎಂ.ಸಿ.ಕುಮಾರ್ ಇತರರಿದ್ದರು. ಹಿರಿಯ ವೈದ್ಯ ಡಾ|| ಕೆ.ಆರ್.ಹನುಮಂತಶೆಟ್ಟಿ ಅವರನ್ನು ಗೌರವಿಸಲಾಯಿತು.

# ವಿಜಯನಗರ ಬಡಾವಣೆಯಲ್ಲಿ ಸಮಸ್ಯೆ: ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ನಗರದ ತಣ್ಣೀರುಹಳ್ಳ ಸಮೀಪದ ವಿಜಯನಗರ ಬಡಾವಣೆಯಲ್ಲಿರುವ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಬಡಾವಣೆ ನಿವಾಸಿಗಳು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ನಿವಾಸಿಗಳು ಎನ್.ಆರ್. ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿ ವರೆಗೆ ಮೆರವಣಿಗೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ಬಡಾವಣೆಯಲ್ಲಿ ದೀರ್ಘಕಾಲದಿಂದ ಸಮಸ್ಯೆಗಳುಕಾಡುತ್ತಿದ್ದರೂ, ಸಂಬಂಧಪಟ್ಟ ಇಲಾಖೆಗಳು ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ರಂಗಸ್ವಾಮಿ ಅವರು ಮಾತನಾಡಿ, ವಿಜಯನಗರ ಬಡಾವಣೆಯಲ್ಲಿರುವ ಕೆರೆಯನ್ನು ಸ್ವಚ್ಛಗೊಳಿಸುವಂತೆ ಮಹಾನಗರ ಪಾಲಿಕೆಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಕೆರೆಯಲ್ಲಿ ಹೂಳು ತುಂಬಿಕೊಂಡಿದ್ದು, ದಟ್ಟವಾಗಿ ಹುಲ್ಲು ಗಾವಲು ಬೆಳೆದು ದುರ್ವಾಸನೆ ಹರಡುತ್ತಿದೆ. ಅದರಿಂದ ರೋಗ ಹರಡುವ ಭೀತಿ ಎದುರಾಗಿದೆ. ದನ-ಕರುಗಳು ಕೂಡ ಕೆರೆಯ ನೀರು ಕುಡಿಯಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.




ಬಡಾವಣೆಯ ಪಶ್ಚಿಮ ಭಾಗದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಕಿಡಿಗೇಡಿಗಳು ಹಾಳು ಮಾಡಿದ್ದು, ಸರಿಯಾದ ನಿರ್ವಹಣೆ ಇಲ್ಲದ ಕಾರಣ ನೀರು ಕುಡಿಯಲು ಯೋಗ್ಯವಾಗಿಲ್ಲ. ಘಟಕಕ್ಕೆ ಯಾವುದೇ ಭದ್ರತೆಯೂ ಇಲ್ಲದ ಹಿನ್ನಲೆ ಅದನ್ನು ಗ್ರಾಮದ ಮಾರಮ್ಮ ದೇವಸ್ಥಾನದ ಎದುರಿನ ಸರ್ಕಾರಿ ಶಾಲಾ ಆವರಣಕ್ಕೆ ಸ್ಥಳಾಂತರಿಸುವಂತೆ ಮನವಿ ಮಾಡಿದರು.

ಗುಡ್ಡೇನಹಳ್ಳಿಯಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೇರಿದ 'ನಮ್ಮ ಕ್ಲಿನಿಕ್' ಆರೋಗ್ಯ ಕೇಂದ್ರದಲ್ಲಿ ಅಗತ್ಯ ವೈದ್ಯಕೀಯ ಉಪಕರಣಗಳು, ವೈದ್ಯರು, ನರ್ಸ್‌ಗಳು ಹಾಗು ಸಿಬ್ಬಂದಿ ಕೊರತೆ ಇದೆ. ನಾಮ್ ಕೇವಾಸ್ತೆಗೆ ಸ್ಥಾಪಿಸಿರುವ ಈ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳೇ ಇಲ್ಲದೆ ಸಾರ್ವಜನಿಕ ಬಳಕೆಗೆ ಬಾರದ ಸ್ಥಿತಿ ನಿರ್ಮಾಣವಾಗಿದೆ. ಅನಾರೋಗ್ಯ ಸಂದರ್ಭದಲ್ಲಿ ಗ್ರಾಮಸ್ಥರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಈ ಎಲ್ಲಾ ಸಮಸ್ಯೆಗಳನ್ನು ತಕ್ಷಣ ಬಗೆಹರಿಸದಿದ್ದಲ್ಲಿ ಉಪವಾಸ ಸತ್ಯಾಗ್ರಹ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ದಸಂಸ ಮುಖಂಡ ಕೃಷ್ಣದಾಸ್, ರಂಗಸ್ವಾಮಿ, ಗುಡ್ಡೇನಹಳ್ಳಿ ಹಂದಿಜೋಗಿ ಸಂಘದ ರಾಜ್ಯ ಉಪಾಧ್ಯಕ್ಷ ಎಂ.ವಿ.ಗೋವಿಂದರಾಜ್, ಚಂದ್ರಗುಪ್ತ ಮೌರ್ಯ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹರೀಶ್ ಉಳುವಾರೆ, ಸುರೇಶ್ ಛತ್ರನಹಳ್ಳಿ ಇದ್ದರು.

# ದೇಶಿ ಕ್ರಿಕೆಟ್ ಟೂರ್ನಿ: ಆಟಗಾರ್ತಿಯರ ವೇತನ ದುಪ್ಪಟ್ಟು

• ಪ್ರಜೋದಯ ವರದಿ

**ನವದೆಹಲಿ:** ದೇಶಿ ಕ್ರಿಕೆಟ್ ಟೂರ್ನಿಯಲ್ಲಿ ಭಾಗವಹಿಸುವ ಮಹಿಳಾ ಕ್ರಿಕೆಟ್ ಆಟಗಾರ್ತಿಯರ ವೇತನವನ್ನು ಭಾರತ ಕ್ರಿಕೆಟ್ ಮಂಡಳಿಯು (ಬಿಸಿಸಿಐ) ಏರಿಕೆ ಮಾಡಿದೆ.

ಭಾರತ ಮಹಿಳಾ ತಂಡವು ಚೊಚ್ಚಲ ವಿಶ್ವಕಪ್ ಗೆದ್ದ ಕೆಲವು ತಿಂಗಳ ನಂತರ, ಬಿಸಿಸಿಐ ಈ ನಿರ್ಧಾರ ಕೈಗೊಂಡಿದೆ. ರಾಷ್ಟ್ರೀಯ ಮಟ್ಟದ ಏಕದಿನ ಹಾಗೂ ಟೆಸ್ಟ್ ಟೂರ್ನಿಯಲ್ಲಿ ಭಾಗವಹಿ ಸುವ ಅಂತರರಾಷ್ಟ್ರೀಯ ಆಟಗಾರ್ತಿಯರಿಗೆ ದಿನಕ್ಕೆ 50 ಸಾವಿರ ಹಾಗೂ ಮೀಸಲು ಆಟಗಾರ್ತಿಯರಿಗೆ ದಿನಕ್ಕೆ 25 ಸಾವಿರ ನೀಡಲಾಗುತ್ತದೆ. ದೇಶಿ ಟಿ-20 ಟೂರ್ನಿಯಲ್ಲಿ ಭಾಗವಹಿಸುವ ಆಟಗಾರ್ತಿಯರಿಗೆ ಪಂದ್ಯಕ್ಕೆ 25 ಸಾವಿರ ಹಾಗೂ ಮೀಸಲು ಆಟಗಾರ್ತಿಯರಿಗೆ 12,500 ವೇತನ ನೀಡಲಾಗುತ್ತದೆಂದು ಬಿಸಿಸಿಐ ತಿಳಿಸಿದೆ. ಈ ಹಿಂದೆ ಅವರಿಗೆ ದಿನಕ್ಕೆ 20 ಸಾವಿರ ಹಾಗೂ ಮೀಸಲು ಆಟಗಾರ್ತಿಯರಿಗೆ ದಿನಕ್ಕೆ 10 ಸಾವಿರ ಸಂಭಾವನೆ ನೀಡಲಾಗುತ್ತಿತ್ತು.

19 ಹಾಗೂ 23 ವರ್ಷದ ಒಳಗಿನ ಜೂನಿಯರ್ ಮಹಿಳಾ ಕ್ರಿಕೆಟಿಗರ ವೇತನವನ್ನು ಕೂಡ ಹೆಚ್ಚು ಮಾಡಲಾಗಿದೆ. ಅವರು ಪಂದ್ಯಕ್ಕೆ 25 ಸಾವಿರ ಪಡೆದರೆ, ಮೀಸಲು ಆಟಗಾರ್ತಿಯರಿಗೆ 12,500 ವೇತನ ನೀಡಲಾಗುತ್ತದೆಂದು ಹೇಳಿದೆ. ಎಲ್ಲಾ ಮಾದರಿಯ ದೇಶಿ ಟೂರ್ನಿಯಲ್ಲಿ ಭಾಗವಹಿಸುವ ಆಟಗಾರ್ತಿಯರು ವಾರ್ಷಿಕ 12 ಲಕ್ಷದಿಂದ 14ಲಕ್ಷದವರೆಗೆಗಳಿಸ ಬಹುದೆಂದು ಬಿಸಿಸಿಐ ಮಾಹಿತಿ ನೀಡಿದೆ.

ದೇಶಿ ಟೂರ್ನಿಯ ವೇಳೆ ಅಂಪೈರ್ ಹಾಗೂ ಮ್ಯಾಚ್ ರೆಫ್ರಿಗಳ ವೇತನವನ್ನು ಕೂಡ ಹೆಚ್ಚು ಮಾಡಲಾಗಿದೆ. ದೇಶಿ ಟೂರ್ನಿಯ ಲೀಗ್ ಪಂದ್ಯಗಳಿಗೆ 40 ಸಾವಿರ ಹಾಗೂ ನಾಕ್ ಔಟ್ ಪಂದ್ಯಗಳಿಗೆ 50 ಸಾವಿರದಿಂದ 60 ಸಾವಿರನೀಡಲಾಗುತ್ತದೆಂದು ಹೇಳಿದೆ.

ಬಿಸಿಸಿಐ ಹೊಸ ವೇತನ ನೀತಿಯ ಅನ್ವಯ, ರಣಜಿ ಟ್ರೋಫಿಯಲ್ಲಿನ ಅಂಪೈರ್‌ಗಳು ಲೀಗ್ ಪಂದ್ಯಕ್ಕೆ 1.60 ಲಕ್ಷ ಪಡೆಯಲಿದ್ದಾರೆ. ನಾಕ್ ಔಟ್ ಪಂದ್ಯಗಳಿಗೆ 2.5 ಲಕ್ಷದಿಂದ 3 ಲಕ್ಷದ ವರೆಗೆ ವೇತನ ಪಡೆಯಲಿದ್ದಾರೆ. ಮಹಿಳಾ ಕ್ರಿಕೆಟ್ ಹಾಗೂ ದೇಶಿ ಟೂರ್ನಿಯ ಬೆಳವಣಿಗೆಯ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಬಿಸಿಸಿಐ ತಿಳಿಸಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019